ಡೋಲಾಕಾರವಾಗಿ ಚಾಲಿಸಿದರೆ ಭವಿಷ್ಯತ್ಕಾಲವೆಂದೂ, ಹಿಂಭಾಗದಲ್ಲಿ ಚಾಚಿ ಹಿಡಿದರೆ ಭೂತಕಾಲವೆಂದೂ ಅರ್ಥವಾಗುತ್ತದೆ.

ಇತರೆ ವಿನಿಯೋಗಗಳು

ವರ್ಷಋತು:– ಪಾರ್ಶ್ವಗಳಲ್ಲಿ ಪತಾಕಗಳನ್ನು ಹಿಡಿದು ಕಂಪಿಸುವುದು.

ದೈವತ ಸಂಗೀತ ಸ್ವರ :– ಪತಾಕವನ್ನು ಸಕಂಪಿತವಾಗಿ ಶರದಂತೆ ಎಳೆಯುವುದು.

ಚಂದ್ರಭಾಗಾನದಿ:– ಪತಾಕ ಹಸ್ತವನ್ನು ಚಲಿಸುವುದು.

ಸುರ (ಅಮೃತಸಾಗರ) :– ಸಂಕೀರ್ಣ ಮತ್ತು ಪತಾಕ ಹಸ್ತಗಳನ್ನು ಮೇಲಕ್ಕೆ ಎತ್ತಿ ಕೆಳಗಿಳಿಸುವುದು.

ಭೂ, ಭುವರ, ಸ್ವರ್ಗ, ಜನ, ತಪ, ಸತ್ಯ, ಮಹರ– ಇವಿಷ್ಟೂ ಸಪ್ತ ಭೂಮಿಗಳನ್ನು ಪ್ರಕಟಿಸಲು ಪತಾಕ ಹಸ್ತವನ್ನು ಮೇಲಕ್ಕೆ ತಿರುಗಿಸಿ ವಿನಿಯೋಗಿಸುವುದು.

ಅತಲ, ವಿತಲ, ಸುತಲ, ತಲಾತಲ, ಮಹಾತಲ, ರಸಾತಲ, ಪಾತಾಳ ಇವಿಷ್ಟೂ ಪಾತಾಳಲೋಕವನ್ನು ಪ್ರಕಟಿಸಲು ಪತಾಕ ಹಸ್ತವನ್ನು ಕೆಳಗೆ ತಿರುಗಿಸಿ ವಿನಿಯೋಗಿಸುವುದು.

ಕೇತಕೀವೃಕ್ಷ, ದಿಲೀಪ ಚಕ್ರವರ್ತಿ, ಚಂದ್ರ, ಕುಜ, ಕೇತು ಗ್ರಹಗಳನ್ನು ಪ್ರಕಟಿಸುವಾಗ ಪತಾಕಹಸ್ತದ ಬಳಕೆಯಾಗುತ್ತದೆ. ಮೊಸಳೆಯನ್ನು ತೋರಿಸಲು ಪತಾಕ ಹಸ್ತವನ್ನು ಹಿಂಬದಿಯಾಗಿ ಜೋಡಿಸಿ ಹಿಡಿದು, ಮೊಸಳೆಯ ಬಾಯಿಯಂತೆ ತೆಗೆದು, ಮುಚ್ಚುವುದನ್ನು ತೋರಿಸುವಲ್ಲಿ ಬಳಕೆಯಾಗುತ್ತದೆ.

ಪೂರ್ವಾಭದ್ರ ನಕ್ಷತ್ರವನ್ನು ತಿಳಿಸಲು ಸಂಕೀರ್ಣ ಪತಾಕದ ಬಳಕೆಯಾಗುತ್ತದೆ (ಸಂಕೀರ್ಣ ಪತಾಕ ಅಂದರೆ ಪತಾಕದಿಂದ ಮಧ್ಯದ ಬೆರಳನ್ನು ಅಂಗೈಯೊಳಗೆ ತರುವುದು). ನಕ್ಷತ್ರವನ್ನು ತಿಳಿಸಲು ಪತಾಕ ಹಸ್ತವನ್ನು ಹಿಡಿದು ಪದೇ ಪದೇ ಅಲ್ಲಾಡಿಸುವುದರಿಂದ ಸಾಧ್ಯ.

*ಕವಿ ಚಿತ್ರಕೋವಿದನು ಪರತತ್ವ ಶೋಧಕನು*
*ವಿವಿಧ ವಾದನ ಗೀತ ನೃತ್ಯ ಕುಶಲಿಗಳು*
*ನವನವತೆಯಂ ಮನಸಿಗೀವೆಲ್ಲ ಕಲೆಗಾರ*
*ರವರಿಂದೆ ಸುಂದರತೆ ಮಂಕುತಿಮ್ಮ.*

**ವಿಳಾಸ: ಸಂಪಾದಕರು, "ನೂಪುರ ಭ್ರಮರಿ", 'ಸಾನಿಧ್ಯ', ದೇಚೂರು ರಸ್ತೆ,**
**ಅಶ್ವತ್ಥ ಕಟ್ಟೆ ಸಮೀಪ, ಮಡಿಕೇರಿ, ಕೊಡಗು, 571201. ಫೋನ್ ನಂ.9880592986.**
**ಇ-ಮೈಲ್ ವಿಳಾಸ: manu.manorama@gmail.com**





**ನೂಪುರ**
# ಭ್ರಮರಿ

ಸಂಚಿಕೆ ೧
**ಜನವರಿ ಫೆಬ್ರವರಿ ೨೦೦೭**

**ನರ್ತನ ಜಗತ್ತಿಗೊಂದು ಪರಿಭ್ರಮಣ..**

ಖಾಸಗಿ ಪ್ರಸಾರದ ದ್ವೈಮಾಸಿಕ

ಸಂಪಾದಕಿ: ಮನೋರಮಾ ಬಿ. ಎನ್.

**ಮಂಜೀರ...**

**ನೃತ್ಯವೋ ಬ್ರಹ್ಮ ನಟರಾಜನದು ಜಗಕೆಲ್ಲಾ**
**ಪ್ರತ್ಯೇಕ ಜೀವ ದಶೆಯುವನಂಗಭಂಗಿ**
**ಸತ್ಯ ಸತ್ವ ಜ್ವಾಲೆ ವಿಶ್ವ ಮಾಯಾ ಲೀಲೆ**
**ಪ್ರತ್ಯಗಾತ್ಮನು ನೀನು ಮಂಕುತಿಮ್ಮ**

**–ಡಿ.ವಿ.ಜಿ.**

**ನ**ರ್ತನವೇ ಬ್ರಹ್ಮ, ನರ್ತನವೇ ವಿಷ್ಣು, ನರ್ತನವೇ ಈಶ್ವರ. ನಟರಾಜನ ನರ್ತನವೇ ಜಗತ್ತು. ನರ್ತನವೇ ಆನಂದ. ನರ್ತನವೇ ಆರೋಗ್ಯ. ಸದಾನಂದಕ್ಕೂ ನರ್ತನ. ಚಿದಾನಂದಕ್ಕೂ ನರ್ತನ. ಭಗವಂತನ ಸಾಕ್ಷಾತ್ಕಾರಕ್ಕೂ ನರ್ತನ. ಇಂತಹಾ ನರ್ತನ ಲೋಕದಲ್ಲಿ ಪರಿಭ್ರಮಣ ಮಾಡುವ ಸಲುವಾಗಿ ಒಂದಷ್ಟು ಸಕಾರಾತ್ಮಕ ಮನಸಿಟ್ಟುಕೊಂಡು ನಿಮ್ಮೆದುರಿಗೆ ಅನಾವರಣಗೊಳ್ಳುತ್ತಿರುವುದೇ **ನೂಪುರ ಭ್ರಮರಿ.**

ಈ ಪುಟ್ಟ ಪತ್ರಿಕೆಯನ್ನು ಪ್ರಾರಂಭಿಸುವ ಹಿಂದಿನ ಕೆಲವೊಂದು ಉದ್ದೇಶಗಳನ್ನು ನಿಮಗೆ ತಿಳಿಸಲೇಬೇಕು. ಸುಮಾರು ಐದು ವರ್ಷಗಳಿಂದ ಪತ್ರಿಕೋದ್ಯಮ ಹಾಗೂ ಸುಮಾರು 14 ವರ್ಷಗಳಿಂದ ಭರತನಾಟ್ಯ ವಿದ್ಯಾರ್ಥಿನಿಯಾಗಿರುವ ನನಗೆ ಪ್ರತೀಸಲ ಬರೆಯಬೇಕಾದಾಗಲೂ ಕಾಣುತ್ತಿದ್ದದ್ದು ನೃತ್ಯಕ್ಕೆ ಸಂಬಂಧಿಸಿದಂತೆ ಭಾವನೆಗಳನ್ನು, ವಿಚಾರಗಳನ್ನು ಹಂಚಿಕೊಳ್ಳಲು ಸೂಕ್ತವಾದ ವೇದಿಕೆಯ ಕೊರತೆ; ಜೊತೆಗೆ ಇತರ ಪತ್ರಿಕೆಗಳಲ್ಲೂ ನೃತ್ಯಮಾಧ್ಯಮದ ಕುರಿತಂತೆ ಸಂವಾದ, ಚರ್ಚೆಗಳು, ವಸ್ತುನಿಷ್ಠ ವಿಮರ್ಶೆಗಳು ವಿರಳವಾಗುತ್ತಿದ್ದದ್ದು. ನೃತ್ಯಕ್ಕೆ, ಅದರಲ್ಲೂ ಭರತನಾಟ್ಯಕ್ಕೆ ಸಂಬಂಧಿಸಿದಂತೆ ಕೆಲವು ಪತ್ರಿಕೆಗಳು ಇವೆಯಾದರೂ ಸಾಮಾನ್ಯ ಜನಜೀವನಕ್ಕೆ ತಲುಪುವ ಸಾಧ್ಯತೆ ಇತ್ತೀಚೆಗೆ ಬಹಳ ಕಡಿಮೆಯಾಗುತ್ತ ಹೋಗಿದೆ. ಜೊತೆಗೆ ನೃತ್ಯದ ಕೇವಲ ಶಾಸ್ತ್ರೀಯತೆಯನ್ನಷ್ಟೇ ಅವಲೋಕಿಸಿದೇ, ಅದರ ಪ್ರಸ್ತುತ ನೆಲೆಗಟ್ಟು, ಸ್ಥಿತಿಗತಿ, ಪರ–ವಿರೋಧ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿಕ್ಕೆ ಪತ್ರಿಕೆ ಬೇಕೆನ್ನಿಸಿದ್ದು ಹೌದು. ಪತ್ರಿಕೋದ್ಯಮದ ವಿದ್ಯಾರ್ಥಿನಿಯಾಗಿ ಕೇವಲ ಸಾಮಾಜಿಕ–ಸಾಮುದಾಯಿಕ

ವಿಷಯಗಳಷ್ಟಕ್ಕೇ ಬೆಳಕು ಚೆಲ್ಲದೆ, ಸಾಂಸ್ಕೃತಿಕವಾಗಿಯೂ ಗಟ್ಟಿಗೊಳ್ಳುವಲ್ಲಿ ಮತ್ತು ವಿರಳವಾಗುತ್ತಿರುವ ಸಾಂಸ್ಕೃತಿಕ ಪತ್ರಿಕೋದ್ಯಮಕ್ಕೊಂದು ಸಣ್ಣಮಟ್ಟಿನ ಉಡುಗೊರೆ ನೀಡುವಲ್ಲಿ ನನಗೂ ಕರ್ತವ್ಯವಿದೆ ಎಂದೆನಿಸಿತು. ಹಾಗಾಗಿ ಪತ್ರಿಕೋದ್ಯಮದ ಆಶಯಗಳನ್ನು ಜೊತೆಗಿಟ್ಟುಕೊಂಡು, ಸಾಂಸ್ಕೃತಿಕ ಅಡಿಪಾಯದಲ್ಲಿ ನೃತ್ಯದ ವಿವಿಧ ಆಯಾಮಗಳತ್ತ ಬೆಳಕು ಚೆಲ್ಲುವ ಪುಟ್ಟ ಪ್ರಯತ್ನ ಎಂಬ ನಂಬುಗೆಯಲ್ಲಿ ಕಣ್ಬಿಡುತ್ತಿರುವ ಹಸುಗೂಸು **ನೂಪುರಭ್ರಮರಿ**'.

ಪತ್ರಿಕೆ ಹುಟ್ಟುಹಾಕುವುದೇನೋ ಸುಲಭ. ಆದರೆ ಅದರ ಸಮರ್ಥ ರೂಪಿಸುವಿಕೆ, ಬೆಳೆಸುವಿಕೆ ಕಷ್ಟಸಾಧ್ಯ. ಹಲವಾರು ಸವಾಲುಗಳನ್ನು ಬೇಡುವ ರಂಗವಿದು. ಸಾಂಸ್ಕೃತಿಕ ರಂಗದ ಬಗ್ಗೆ ಅದರಲ್ಲೂ ನೃತ್ಯದ ಕುರಿತಾಗಿ ಸೀಮಿತ ಅಭಿಪ್ರಾಯಗಳು, ಸೀಮಿತ ಓದುಗರು, ಓದುವ ಮತ್ತು ಬರೆಯುವ ನಿಟ್ಟಿನಲ್ಲೂ ಸೀಮಿತ ಸಾಧ್ಯತೆಗಳಿವೆ. ಆದರೆ ಪತ್ರಿಕೆಯನ್ನು ಕೇವಲ ನೃತ್ಯ–ನಾಟ್ಯರಂಗದ ಕಲಾವಿದರಿಗೆ, ಗುರುಗಳಿಗೆ ಸೀಮಿತವಾಗಿರಿಸದೆ ಸಾಮಾನ್ಯ ವೀಕ್ಷಕ, ಓದುಗರಿಗೂ ಮುಟ್ಟಬೇಕು, ಸದಭಿರುಚಿಯ ಎಲ್ಲರಿಗೂ ತಲುಪುವಂತಾಗಬೇಕು ಎಂಬ ಆಶಯ ನಮ್ಮದು. ನೃತ್ಯದ ಕುರಿತಾಗಿ ಚಿಂತನೆಗಳು ಎಲ್ಲಾ ಕಡೆಯಿಂದಲೂ ಹರಿದು ಬಂದು ನೃತ್ಯದ ಆಯಾಮಗಳತ್ತ ಜಾಗೃತಿ, ಅರಿವು ಮೂಡಬೇಕೆಂಬ ಹಂಬಲ ನಮ್ಮದು . 'ಸೀಮಿತ ವರ್ಗಕ್ಕೆ ಮಾತ್ರ' ಎಂಬ ಅಪವಾದವನ್ನು ಬದಿಗಿರಿಸಿ ನರ್ತನ ಜಗತ್ತಿನ ಹಲವು ಒಳತೋಟಿಗಳನ್ನು ಅರ್ಥವಾಗುವಂತೆ ವಿವರಿಸುವ ಪ್ರಯತ್ನ ಜೊತೆಗಿನದು. ಪ್ರಾಂತೀಯ ಪ್ರಾಮುಖ್ಯತೆಯನ್ನು ಗಮನದಲ್ಲಿರಿಸಿಕೊಂಡು ಭರತನಾಟ್ಯಕ್ಕೆ ಹೆಚ್ಚಿನ ಅವಕಾಶ ಕೊಡುವ ಉದ್ದೇಶವಿದೆಯಾದರೂ, ಇತರ ನೃತ್ಯಪ್ರಕಾರಗಳ ಕುರಿತು ಸಾದ್ಯಂತವಾಗಿ ವಿಚಾರ ವಿಮರ್ಶೆಗಳನ್ನು ಹಂಚಿಕೊಳ್ಳುವ ಕನಸಿದೆ. ಪತ್ರಿಕೆಯ ಪ್ರೋತ್ಸಾಹಕರಾಗಿ ಗೆಳೆಯರ ಬಳಗವಿದ್ದರೂ ಏಕಸಂಪಾದಕತ್ವ ಮತ್ತು ಪ್ರಕಾಶನದಲ್ಲಿ ಮುನ್ನಡೆಯಬೇಕಾಗಿದೆ. ತಾವೆಲ್ಲರೂ 'ನೂಪುರ ಭ್ರಮರಿ'ಯ ಜೊತೆಗಿರುತ್ತೀರಿ ಎಂಬ ನಂಬಿಕೆಯನ್ನು ಬಗಲಿಗಿಟ್ಟು ಮುನ್ನಡೆಯುತ್ತೇವೆ..

ಪುಟಾಣಿ ಪತ್ರಿಕೆಯಾದರೂ, ಇದು ಮೌಲ್ಯಯುತವಾದುದನ್ನಷ್ಟೇ ಹಂಚಿಕೊಳ್ಳುತ್ತದೆ ಎಂಬ ಆಶ್ವಾಸನೆಯನ್ನು ಮೊದಲಿಗೆ ನೀಡಲಿಚ್ಚಿಸುತ್ತೇವೆ. ಜೊತೆಗೆ ಖಾಸಗಿ ಹಂಚಿಕೆಯ ದ್ವಿಮಾಸಿಕವಾಗಿದ್ದು ಯಾವುದೇ ಲಾಭದ ಉದ್ದೇಶವೂ ಇದರ ಹಿಂದಿಲ್ಲ ಎಂಬುದನ್ನು ಸ್ಪಷ್ಟಪಡಿಸಲು ಇಚ್ಚಿಸುತ್ತೇವೆ. ಇದು ನಮ್ಮನ್ನು ನಾವು ಕಂಡುಕೊಳ್ಳುವ, ಅರಿಯುವ, ಅರ್ಥೈಸುವ, ಅರಿವನ್ನು ಹೆಚ್ಚಿಸಿಕೊಳ್ಳುವ ನಿಟ್ಟಿನಲ್ಲಿ ಮುಕ್ತವೇದಿಕೆ ರೂಪುಗೊಳ್ಳಬೇಕೆಂಬ ಸಣ್ಣ ಮಟ್ಟಿನ ಸ್ವಾರ್ಥ.

ಪತ್ರಿಕೋದ್ಯಮ ಎನ್ನುವ ಕೃಷಿಯಲ್ಲಿ **ನೂಪುರ ಭ್ರಮರಿ** ಇನ್ನೂ ಚಿಗುರೊಡೆಯುವ ಸಸಿ. ಅದನ್ನು ಭವಿಷ್ಯದ ಹೆಮ್ಮರವಾಗಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರದು. ನೃತ್ಯದ



**ಸಂಕರ ಹಸ್ತವಾಗಿ ಪತಾಕ:–**

ವಿ. ಎಸ್. ಕೌಶಿಕ್‌ರ ಭರತನಾಟ್ಯ ದಿಗ್ದರ್ಶನ ತಿಳಿಸಿಕೊಡುವಂತೆ ಪತಾಕ ಹಸ್ತವನ್ನು ಚಲಿಸದೆ ಸಮೀಪದಲ್ಲಿ ಹಿಡಿಯುವುದರಿಂದ ಅದು ಎಂದು ತೋರಿಸುವ ಭಾವನೆಯಲ್ಲಿಯೂ, ಜ್ಯೋತಿಶ್ಶಾಸ್ತ್ರ ವಿಚಾರದಲ್ಲಿಯೂ, ಉಚಿತಾರ್ಥದಲ್ಲಿಯೂ ವಿನಿಯೋಗಿಸಬಹುದು.

ಎರಡು ಪತಾಕ ಹಸ್ತಗಳನ್ನು ಸೊಂಟಪ್ರದೇಶದಿಂದ ಎರಡು ತೊಡೆಗಳ ಮಧ್ಯದಲ್ಲಿ ಹಿಡಿದರೆ ಎಲೆಗಳ ವಸ್ತ್ರ ಅಥವಾ ನವಿಲುಗರಿಗಳ ವಸ್ತ್ರಯೆಂಬ ಅರ್ಥದಲ್ಲಿಯೂ ಉಪಯೋಗಿಸಬಹುದು. ಎರಡು ಪತಾಕಹಸ್ತಗಳನ್ನು ಸೊಂಟದಲ್ಲಿ ಅನ್ಯೋನ್ಯಭಿಮುಖವಾಗಿ ಹಿಡಿದರೆ ಯೋಗವಟ್ಟಿಗೆ, ನಾರುಬಟ್ಟೆಯನ್ನು ತೋರಿಸುವ ಅರ್ಥದಲ್ಲಿಯೂ ವಿನಿಯೋಗಿಸಬಹುದು.

ಪತಾಕಹಸ್ತದಲ್ಲಿ ಕಿರುಬೆರಳಿನ ಮೂಲದಲ್ಲಿ ಹೆಬ್ಬೆರಳ ತುದಿಯನ್ನಿಟ್ಟರೆ ಪತಾಕಚತುರ ಹಸ್ತವೆನಿಸುತ್ತದೆ. ಈ ಹಸ್ತವನ್ನು ಮುಖದ ಸಮೀಪದಲ್ಲಿ ಹಿಡಿದರೆ ಬಿಳಿಯಬಣ್ಣವೆಂದೂ, ಸಾರು, ತೊವ್ವೆ ಮುಂತಾದ ವ್ಯಂಜನ ಪದಾರ್ಥವೆಂದೂ ವಿನಿಯೋಗಿಸಬಹುದು. ಪತಾಕ ಹಸ್ತವನ್ನು ಅಡ್ಡಲಾಗಿ ಹಿಡಿದರೆ ಪೀತವರ್ಣ ಎಂಬ ಅರ್ಥದಲ್ಲಿ, ಪತಾಕಹಸ್ತದಿಂದ ತೊಡೆಯ ಪ್ರದೇಶವನ್ನು ತೋರಿಸಿದರೆ ವೈಶ್ಯವರ್ಣವೆಂದೂ, ಭುಜಪ್ರದೇಶವನ್ನು ಪತಾಕದ ಅಗ್ರಭಾಗದಿಂದ ತೋರಿಸಿದರೆ ಕ್ಷತ್ರಿಯ, ಭುಜ, ವಿಜಯ, ಬತ್ತಳಿಕೆ, ಹಿಂಭಾಗದಲ್ಲಿರುವ ಪುರುಷನೆಂದೂ – ಈ ಅರ್ಥಗಳಲ್ಲಿ ವಿನಿಯೋಗಿಸಬಹುದು.

**ನಾನಾರ್ಥ ಹಸ್ತವಾಗಿ ಪ್ರತಾಕ:–**

ಎರಡು ಪತಾಕ ಚತುರ ಹಸ್ತಗಳನ್ನು ಪರಸ್ಪರ ಅಭಿಮುಖವಾಗಿ ಹಿಡಿದರೆ ವಾನಪ್ರಸ್ಥಾಶ್ರಮ, ಪುರೋಭಾಗದಲ್ಲಿ ತಿರುಗಿಸಿದರೆ ದೇವತೆಗಳಿಗೆ ನೀರಾಜನ, ಊರ್ಧ್ವಮುಖಗಳನ್ನಾಗಿ ಮಾಡಿ ತುದಿಗಳನ್ನು ಸೇರಿಸಿದರೆ ಪರ್ಣಶಾಲೆ ಈ ಅರ್ಥಗಳಲ್ಲಿ ವಿನಿಯೋಗವಾಗುತ್ತದೆ.

ಎರಡು ಪತಾಕ ಹಸ್ತಗಳನ್ನು ತೊಡೆಗಳ ಸಮೀಪದಲ್ಲಿ ಹಿಡಿದರೆ ಮದ್ದಳೆ ಎಂದೂ, ಚಾಲಿಸಿದರೆ ಮದ್ದಳೆ ಬಾರಿಸುವುದೆಂದೂ, ಕೆನ್ನೆಗಳ ಹತ್ತಿರ ಹಿಡಿದರೆ ಕೆನ್ನೆಯೆಂದೂ, ಅಲ್ಲಿಯೇ ಚಾಲಿಸಿದರೆ ಕೆನ್ನೆಗೆ ಹೊಡೆಯುವುದೆಂದು ಸೂಚಿಸಲು ವಿನಿಯೋಗಿಸಬಹುದು.

ಪತಾಕಹಸ್ತವನ್ನು ಪುರೋಭಾಗದಲ್ಲಿ ಚಾಚಿದರೆ ಪ್ರಯಾಣ ಅಥವಾ ಜಾಗ ಬಿಡುವುದು ಅಥವಾ ಹೊರಡುವುದು ಎಂಬ ಅರ್ಥವಾಗುವುದು.

ಪತಾಕವನ್ನು ಕೆಳಗಡೆ ಹಿಡಿದರೆ ವರ್ತಮಾನಕಾಲವೆಂದೂ, ಪುರೋಭಾಗದಲ್ಲಿ

ತೋರಿಸುವುದು, ಗುರಾಣಿ ಹಿಡಿಯುವುದು, ಪದಾರ್ಥಗಳನ್ನು ಮುಟ್ಟುವುದು, ರಾಜಶ್ರೇಷ್ಠ, ಅಲ್ಲಿ ಅಲ್ಲಿ ಎಂದು ಹೇಳುವುದು, ಸಮುದ್ರ, ಒಳ್ಳೆಯ ಕೆಲಸ (ಸುಕೃತ), ಉದ್ದೇಶಿಸುವುದು, ಮುಂದೆ ಹೋಗುವುದು, ಖಡ್ಗವನ್ನು ಧಾರಣೆ ಮಾಡುವುದು, ತಿಂಗಳು, ವರ್ಷ, ಮಳೆಯದಿನ, ಗುಡಿಸುವುದು.

**ಇತರೆ (ನಾಟ್ಯಶ್ಯಾಸ್ತ್ರ, ಲಾಸ್ಯರಂಜನ, ಸಾರಸಂಗ್ರಹ) ವಿನಿಯೋಗ:–** ಜಯಜಯವೆಂಬ ಮಾತು, ಅಡ್ಡಗಟ್ಟುವುದು, ಪರಿಶುದ್ಧ ವಸ್ತು, ದೇವಾಗಾರ, ಪ್ರಾತಃಕಾಲ, ರಾಜ ವಿಜ್ಞಾಪನೆ, ವಾಹನಪ್ರಯಾಣ, ಸಾಗರ, ನದಿ, ದೇವತಾನುಗ್ರಹ, ನೀರು, ಭಯನಿವಾರಣೆ, ಪಾದಸೇವೆ, ಆರತಿ ಎತ್ತುವುದು, ಪಕ್ಷಿಗಳರೆಕ್ಕೆ, ಧ್ವಜ, ನೀರು, ಆಲಿಂಗನ, ಓಡಿ ಹೋಗುವುದು, ಪಟ್ಟದಕತ್ತಿ, ಮರ್ದನ, ಮಾರ್ಜನೆ, ಎತ್ತರ, ನಗಾರಿ ಹೊಡೆ, ಕಲ್ಲು ಮೊದಲಾದ ತೂಕದ ಪದಾರ್ಥಗಳನ್ನು ಧರಿಸುವುದು, ಚೆಂಡು ಮೊದಲಾದವನ್ನು ಮೇಲಕ್ಕೆಸೆಯುವುದು, ಹಾಲು, ಅಹಂಕಾರ, ಉತ್ತರಾಯಣ, ಪ್ರಹಾರ, ಸಂತೋಷ– ಹೆಮ್ಮೆಯನ್ನೂ ಸೂಚಿಸುವುದು, ಯಾವುದೋ ಕೆಳಗೆ ಬೀಳುವುದು, ಯಾವುದನ್ನೋ ಬಿಚ್ಚುವುದು, ಬಚ್ಚಿಡುವುದು. ಕಥಕ್ಕಳಿಯಲ್ಲಿ ಪತಾಕವನ್ನು ತ್ರಿಪತಾಕ ಹಸ್ತ ಎನ್ನುತ್ತಾರೆ.

ಯಕ್ಷಗಾನದಲ್ಲಿ ಕನ್ನಡಿ, ಮಂಚ, ಸೈನಿಕರು, ಸಭೆಯನ್ನು ಸೂಚಿಸುವುದು ಹೀಗೆ ಪತಾಕ ಮತ್ತಷ್ಟು ಅರ್ಥಗಳನ್ನು ಕೊಡುತ್ತದೆ. ಪತಾಕವು ನೃತ್ತಹಸ್ತದ(ನರ್ತನ ಸಂದರ್ಭದಲ್ಲಿ ಬಳಸಲಾಗುವ ಹಸ್ತಗಳು) ಭಾಗವೂ ಆಗಿದೆ. ಇದು ಬೇರೆಬೇರೆ ನಿರೂಪಣೆಗಳು, ವಿವಿಧ ದೇವತಾ ರೂಪ ನಿದರ್ಶನದಲ್ಲೂ ಪ್ರಕಟಗೊಳ್ಳುತ್ತದೆ. ಹಾಗೆಯೇ ಕೆದರಿದ ಗರಿಯನ್ನು, ವಿದಾಯದ ಸಂದರ್ಭಗಳಲ್ಲಿ ಟಾಟಾ ಮಾಡುವುದು, ತರುವುದು, ತೆಗೆದುಕೊಂಡು ಹೋಗುವುದು, ಬಾ ಎಂದು ಹೇಳುವುದು, ಬೇಡ ಎನ್ನಲು, ನಿರ್ಲಕ್ಷ್ಯ ಭಾವನೆಗೆ, ಹೋಗು ಎನ್ನಲು, ಹಿಂದಕ್ಕೆ ತಳ್ಳುವುದು, ಕತ್ತಿಯ ಚಲನೆಯ ಭಾವ, ದೋಣಿಯ ಹುಟ್ಟು ಹಾಕುವಾಗ ನೀರನ್ನು ಸೀಳುವ ಭಾವ ಮುಂತಾಗಿ ಉಪಯೋಗಿಸಲ್ಪಡುತ್ತದೆ.

ಕುಂಚಿತ ಪತಾಕವೆಂದು ಉಪಯೋಗಿಸಲಾಗುವ ಪತಾಕದ ಮತ್ತೊಂದು ಪ್ರಬೇಧದಲ್ಲಿ ಅಂಗೈ ಮಧ್ಯ ಭಾಗವನ್ನು ಕುಗ್ಗಿಸಿ ಎಲ್ಲಾ ಬೆರಳುಗಳನ್ನು ಸ್ವಲ್ಪ ಬಗ್ಗಿಸಲಾಗುತ್ತದೆ. ಇದನ್ನು ಸ್ತ್ರೀ, ಸಖಿ, ಚಿಕ್ಕದಾದದ್ದು, ಬಾ ಎಂದು ಕರೆಯಲು, ತೀಡಲು, ನೀನೇ ಎಂದು ತೋರಿಸಲು, ಸ್ವಲ್ಪ ಎನ್ನಲು, ಇಷ್ಟೇಯೇ ಎಂಬ ಭಾವನೆಗೆ, ಅಲ್ಲೇಲ್ಲೋ ದೂರಕ್ಕೆ ಎಂದು ತೋರಿಸುವಾಗ ಇತ್ಯಾದಿಯಾಗಿ ಬಳಕೆಯಾಗುತ್ತದೆ.

ಈ ಎಲ್ಲಾ ವಿನಿಯೋಗಗಳೂ ಕೈಗಳನ್ನು ವಿವಿಧ ಕಡೆಗೆ ಇಟ್ಟಾಗ ನಿರ್ದಿಷ್ಟಾರ್ಥವಾಗಿ ಅಭಿವ್ಯಕ್ತಗೊಳ್ಳುತ್ತದೆ. ಒಂದೇ ಹಸ್ತವನ್ನು ಬೇರೆ ಬೇರೆ ಸ್ಥಾನಗಳಲ್ಲಿಟ್ಟು ಅದರ ನಿಲುವಿನ ಅಂಶವನ್ನು ವಿವಿಧ ದೃಷ್ಟಿಕೋನಗಳಿಂದ ನೋಡಬಹುದು. ಅದರ ಭಾವನೆಯನ್ನು ಉಪಯೋಗಿಸಿಕೊಳ್ಳುವಾಗ ಅದರ ವ್ಯಾಪ್ತಿಯೂ ವಿಶಾಲವಾಗಿರುತ್ತದೆ.



ಕುರಿತಾಗಿ ಬರುವ ಕ್ಲೀಷೆಯೆನಿಸಿಕೊಂಡ ಮಾಮೂಲಿ ವಿಮರ್ಶೆಗಳ ಸಾಧ್ಯತೆಯನ್ನು ಆದಷ್ಟೂ ಕಡಿಮೆ ಮಾಡುವುದು ಪತ್ರಿಕೆಯ ಆಶಯಗಳಲ್ಲೊಂದು. ಹಾಗಂತ ಆವರಣವಿಲ್ಲವೆಂದಲ್ಲ. ಆವರಣವಿಲ್ಲದ ಕೃಷಿ ಕಾಡಾಗಿ,ಮುಳ್ಳು ಕಂಟಿಗಳ ಸ್ಥಾನವಾಗಿ ಹೋಗುತ್ತದೆ. ಆದರೆ "ಅಪ್ಪ ಹಾಕಿದ ಆಲದ ಮರಕ್ಕೆ" ಜೋತು ಬೀಳುವ ಪರಿಪಾಠ ಮುಂದುವರಿಯದಂತೆ ನೋಡಿಕೊಳ್ಳಬೇಕೆಂಬ ಆಸೆಯಿದೆ.

ಪತ್ರಿಕೆಯನ್ನು ಪ್ರಾರಂಭಿಸುವಲ್ಲಿ ವಿಮರ್ಶನಾಶೀಲ ಚರ್ಚೆಗಳನ್ನು ಒದಗಿಸಿದ ತಂದೆತಾಯಿಯರಿಗೂ, ಎಲ್ಲಾ ಗುರುಹಿರಿಯರಿಗೂ, ಗೆಳೆಯರಾದ ವಿಷ್ಣುಪ್ರಸಾದ್ ನಿಡ್ಡಾಜೆ, ಚೈತ್ರರಶ್ಮಿಯ ಸಂಪಾದಕ ರಾಮಚಂದ್ರ ಹೆಗಡೆ, ರಾಧಿಕಾ ವಿಟ್ಲ, ಶ್ರೀ ಲಕ್ಷ್ಮೀ ಎಂ. ಭಟ್, ಪರಶುರಾಮ ಕಾಮತ್‌ರಿಗೆ ಮನತುಂಬಿದ ಕೃತಜ್ಞತೆಗಳು.

ನಿಮ್ಮ ಸಲಹೆ, ಸಹಾಯ, ಸಹಕಾರ ನೂಪುರ ಭ್ರಮರಿ'ಗೆ ಇರುತ್ತದೆ. ತಾನೇ?

ಇಂತು ನಿಮ್ಮ

**ಮನೋರಮಾ. ಬಿ. ಎನ್**

## 'ನೂಪುರ ಭ್ರಮರಿ' ಎಂದರೆ ........

ಪತ್ರಿಕೆಗೆ ಎಂತಹ ಹೆಸರಿಟ್ಟರೆ ಒಳಿತು ಎಂಬ ಚರ್ಚೆ ಬಂದಾಗ ಹಲವು ವಿಚಾರಗಳು ಹೊಳೆಯಿತು...... ಮಂದಿರ, ನಾಟ್ಯ..., ನೃತ್ಯ..., ಹೆಜ್ಜೆ, ಗೆಜ್ಜೆ, ಕಿಂಕಿಣಿ, ಧೀಂಗಿಣ, ಚಿದಂಬರ... ಹೀಗೆ ಹಲಕೆಲವು ಹೆಸರುಗಳು ಸಂಯೋಗಗೊಂಡವು. ಹೀಗೆ ಪತ್ರಿಕೆಗೆ ಹೆಸರಿಡುವ ಪ್ರಕ್ರಿಯೆಗೇ 4 ತಿಂಗಳು ತೆಗೆದುಕೊಂಡಿದ್ದು ಸುಳ್ಳಲ್ಲ ! ಏಕೆಂದರೆ ಯಾವುದೇ ಸೀಮಿತವರ್ಗದ ಕಲ್ಪನೆಯನ್ನು ಕಟ್ಟಿಕೊಡುವ ಅಂಕಿತ ಪತ್ರಿಕೆಯದ್ದಾಗಿರಬಾರದು; ಜೊತೆಗೆ ನೃತ್ಯ ಲೋಕಕ್ಕೊಂದು ಪರಿಭ್ರಮಣವೇ ಅದಾಗಿರಬೇಕು. ಹಾಗಾಗಿ ನೃತ್ಯ – ನಾಟ್ಯ ಎಂಬ ಹೆಸರಿನ ಕ್ಲೀಷೆಗಳನ್ನು ಬದಿಗಿಟ್ಟು 'ನೂಪುರ ಭ್ರಮರಿ' ಎಂಬ ಹೆಸರನ್ನು ಆಯ್ದುಕೊಳ್ಳಲಾಯಿತು. ಜೊತೆಗೆ ಹೆಸರಿನ ಅಗಾಧ ಅರ್ಥವನ್ನು ಕೆಳಕಂಡಂತೆ ವಿವೇಚಿಸಲಾಗಿದೆ.

ಭರತನಾಟ್ಯಶಾಸ್ತ್ರ ಮತ್ತು ನಂದಿಕೇಶ್ವರನ ಅಭಿನಯದರ್ಪಣದ ಪ್ರಕಾರ 'ಭ್ರಮರಿ' ಎಂದರೆ ಪಾದ ಭೇದಗಳಲ್ಲಿ ಒಂದು ಬಗೆ. ಅದು ಆಕಾಶಕೀಚಾರೀಯೂ ಹೌದು....; ಭ್ರಮರಿ ಎಂಬುದರ ಅರ್ಥ ಗೋಳಾಕಾರವಾಗಿ ತಿರುಗುವುದು. ಈ ತಿರುಗುವಿಕೆ ಕೇವಲ ನೃತ್ಯದ ಪರಿಭಾಷೆಯಾಗಿ ಮಾತ್ರವಲ್ಲ, ನರ್ತನ ಜಗತ್ತಿನ ವೈಶಾಲ್ಯತೆಯನ್ನು ಪುಟ್ಟ ಬೊಗಸೆಯಲ್ಲಿ ತುಂಬಿಕೊಳ್ಳುವ ಪ್ರಯತ್ನದ ಪರಿಭ್ರಮಣವೂ ಆಗಬೇಕು ಅನ್ನುವುದು ನಮ್ಮ ಕನಸು.

ನಾಟ್ಯಶಾಸ್ತ್ರದಲ್ಲಿ ಹೇಳಲಾದ ಭ್ರಮರಿ ಎಂಬ ಆಕಾಶಕೀ ಚಾರಿಯಲ್ಲಿ 7 ಬಗೆಗಳಿವೆ. ಅವು ಉತ್ಪ್ಲುತ ಭ್ರಮರಿ, ಚಕ್ರಭ್ರಮರಿ, ಗರುಡಭ್ರಮರಿ, ಏಕಪಾದ ಭ್ರಮರಿ, ಕುಂಚಿತ ಭ್ರಮರಿ, ಆಕಾಶ ಭ್ರಮರಿ, ಮತ್ತು ರಂಗ ಭ್ರಮರಿ ನರ್ತನ ಮಾಡುವಾಗ ಈ ವಿಧವಿಧವಾದ ಅಂದರೆ ಭೂಮಿಯ ಮೇಲೆ ಕಾಲನ್ನಿಟ್ಟು ತಿರುಗುವುದು, ಕಾಲನ್ನೆತ್ತಿ ತಿರುಗುವುದು, ಕಾಲುಗಳನ್ನು ಬಗ್ಗಿಸಿ ತಿರುಗುವುದು, ಕುಳಿತು ತಿರುಗುವುದು– ಮುಂತಾದ ಭ್ರಮರಿಗಳನ್ನು ಉಪಯೋಗಿಸುತ್ತೇವೆ. ನೇರ ಮತ್ತು ಅಕ್ಕಪಕ್ಕದಲ್ಲಷ್ಟೇ ಅಲ್ಲದೆ ನಮ್ಮ ಸುತ್ತಮುತ್ತಲಿನ ಅಷ್ಟೂ ವಸ್ತು ವಿಷಯಗಳ ಅವಲೋಕನ ಭ್ರಮರಿಯಿಂದಷ್ಟೇ ಸಾಧ್ಯ.

"ನೂಪುರ" ಎಂದರೆ ಎಲ್ಲರಿಗೂ ತಿಳಿದಂತೆ ಗೆಜ್ಜೆ ಎಂಬ ಅರ್ಥವಿದೆ. ಆದರೆ ನೂಪುರ ಎಂಬುದೊಂದು ಕರಣವೂ ಹೌದು. ನಾಟ್ಯಶಾಸ್ತ್ರದ ಪ್ರಕಾರ 32 ಚಾರಿಗಳ ಪೈಕಿ ನೂಪುರಪಾದವೆಂಬುದು ಆಕಾಶ ಚಾರಿಯ ಒಂದು ಬಗೆಯೂ ಹೌದು. ಅದರಲ್ಲೂ "ನೂಪುರ ಭ್ರಮರಿ ಒಂದು ದೇಶೀಕರಣ.

ಭ್ರಮರಿಯ ಹತ್ತಿರದ ಪದ ಭ್ರಮರ. ಭ್ರಮರ ಎಂಬುದರ ಬಗ್ಗೆ ನೃತ್ಯ ಕ್ಷೇತ್ರದಲ್ಲಿ ಹಲವು ವಿಶ್ಲೇಷಣೆಗಳಿವೆ. ಭ್ರಮರ ಎಂದರೆ ದುಂಬಿ. ಭ್ರಮಣ ಎಂಬುದು ತಾರಾಕ್ರಮ, ಭ್ರಮರಕ ಎಂಬುದೊಂದು ಕರಣ. ಜೊತೆಗೆ ಅಸಂಯುತ ಹಸ್ತಗಳಲ್ಲಿ 'ಭ್ರಮರ' ಎಂಬ ಹಸ್ತಜಾತಿಯಿದೆ. ಮಧ್ಯಮ ಮತ್ತು ಹೆಬ್ಬೆರಳು ತುದಿಯನ್ನು ಕೂಡಿಸಿ ತೋರುಬೆರಳನ್ನು ಅದರ ಮಧ್ಯಕ್ಕೆ ಬಾಗಿಸಬೇಕು ನಂತರ ಉಳಿದ ಉಂಗುರ ಮತ್ತು ಕಿರುಬೆರಳನ್ನು ವಿಂಗಡಿಸಿ ಚಾಚಿ ಹಿಡಿದರೆ ಭ್ರಮರ ಹಸ್ತವಾಗುತ್ತದೆ. ಈ ಭ್ರಮರಹಸ್ತ ದುಂಬಿ, ಗಿಣಿ, ಕೋಗಿಣಿ, ಕಮಲ, ಮುಂತಾದ ಉದ್ದನೆಯ ತೊಟ್ಟುಗಳುಳ್ಳ ಹೂಗಳನ್ನು ಕೊಯ್ಯುವುದು, ವಿಷಯಗಳನ್ನು ತೋರಿಸಲು ಬಳಸಲಾಗುತ್ತದೆ.

## ಒಂದು ಸಾಲು.....

ಖಾಸಗಿ ವಲಯದ ಪ್ರಸಾರಕ್ಕಾಗಿ ಪತ್ರಿಕೆಯನ್ನು ಹೊರತರುತ್ತಿರುವುದರಿಂದ ಎಲ್ಲಾ ನೋಂದಾಯಿತ ಪತ್ರಿಕೆಗಳ ಜೊತೆಗೆ ಹೋಲಿಕೆ ಮಾಡಿಕೊಳ್ಳಲಾರಿರಿ ಎಂಬ ವಿಶ್ವಾಸ ನಮಗಿದೆ. ಆದರೂ ಪತ್ರಿಕೆಯನ್ನು ಜವಾಬ್ದಾರಿಯುತವಾಗಿ ನಿರೂಪಿಸುವಲ್ಲಿ ನಮ್ಮ ಕೈಲಾದಷ್ಟೂ ಪ್ರಯತ್ನಿಸುತ್ತೇವೆ. ಖರ್ಚು–ವೆಚ್ಚವೂ ವೈಯಕ್ತಿಕ ನೆಲೆಗಟ್ಟಿನಲ್ಲಿಯೇ ನಿರ್ಧಾರವಾಗುವುದರಿಂದ, ಮುಂದಿನ ತಿಂಗಳುಗಳಲ್ಲಿ ಪತ್ರಿಕೆಯ ಕುರಿತು ಆಸಕ್ತರು ಒಂದು ಸಾಲು ಬರೆದು ತಿಳಿಸಿದರೂ ಸಾಕು, ಖಾಸ್ಗಿ ಪ್ರಸಾರಿತವಾದರೂ ಅವರವರ ವಿಳಾಸಕ್ಕೆ ಉಚಿತವಾಗಿ ಪತ್ರಿಕೆಯನ್ನು ತಲುಪಿಸಲಾಗುವುದು.




# ಹಸ್ತ ಮಯೂರಿ

ಭರತನಾಟ್ಯದ ಆಂಗಿಕಾಭಿನಯದಲ್ಲಿ ಮುಖ್ಯವಾದದ್ದು ಹಸ್ತಮುದ್ರೆಗಳು .ನಾನಾಭಾವನೆಗಳನ್ನು ಸೂಚಿಸಲು ನಾನಾ ಹಸ್ತಗಳನ್ನು ಬಳಸಲಾಗುತ್ತದೆ. ಉದ್ದಿಷ್ಟಾರ್ಥದ ಅಭಿವ್ಯಂಜನೆಗೆ, ಧ್ಯಾನಾನುಕೂಲತೆಗೆ, ಶರೀರ ಸೌಖ್ಯ ಹತೋಟಿಗೆ ಬಳಸಲಾಗುವ ಹಸ್ತಗಳು ಶಾಸ್ತ್ರರೀತ್ಯಾ ನರ್ತನಪ್ರಕಾರಗಳಲ್ಲಿ ಬಳಸಲ್ಪಡುತ್ತದೆ. ಆದರೆ ಹಲವರಿಗೆ ಆ ಹಸ್ತಗಳ ನಿರ್ದಿಷ್ಟ ಪರಿಚಯ, ಅವು ಮಾಡುವ ಸಂವಹನ ಸಾಧ್ಯತೆಗಳ ಬಗೆಗೆ ಅಷ್ಟಾಗಿ ಅರಿವಿಲ್ಲ. ಈ ನಿಟ್ಟಿನಲ್ಲಿ ನೃತ್ಯಕ್ಷೇತ್ರದಲ್ಲಿ ವಿವರಿಸಲಾದ ಹಸ್ತಮುದ್ರೆಗಳ ಕುರಿತಾಗಿ ಬೆಳಕು ಚೆಲ್ಲುವ ಪ್ರಯತ್ನ ಇದೀಗ ನಿಮ್ಮ ಮುಂದೆ. ಪ್ರತೀ ಸಂಚಿಕೆಗೊಂದರಂತೆ ಹಸ್ತಮುದ್ರೆಗಳ ಲಕ್ಷಣ, ವಿನಿಯೋಗ ಅವುಗಳ ಬಳಕೆ, ಮತ್ತು ಇತರ ಸಾಧ್ಯತೆಗಳ ಕುರಿತಂತೆ ಕಿರುಪರಿಚಯವನ್ನು ಮಾಡಲಾಗುವುದು.

**ಅಸಂಯುತ ಹಸ್ತಗಳು:–**

ಅಸಂಯುತ ಹಸ್ತವೆಂದರೆ ಒಂದೇ ಕೈಲಿ ತೋರಿಸುವ ಮುದ್ರೆ ಎಂದರ್ಥ. ಇದರಲ್ಲಿ ಮೊತ್ತ ಮೊದಲನೆಯದಾಗಿ ಹೆಸರಿಸಲಾದ ಹಸ್ತ ಪತಾಕ. ಭರತನ ನಾಟ್ಯಶಾಸ್ತ್ರದಲ್ಲಿ ಮತ್ತು ನಂದಿಕೇಶ್ವರನ ಅಭಿನಯ ದರ್ಪಣದಲ್ಲಿ ಹೇಳಲಾದ ಅಸಂಯುತ ಹಸ್ತಗಳ ಬಳಕೆಯಲ್ಲಿ ವಿಭಿನ್ನತೆಗಳಿವೆ. ಅಭಿನಯ ದರ್ಪಣದಲ್ಲಿ ಹೆಬ್ಬೆರಳು ಮಡಿಚಿದರೆ, ನಾಟ್ಯಶಾಸ್ತ್ರವು ಹೆಬ್ಬೆರಳು ನೇರವಾಗಿರಿಸಲು ಸೂಚಿಸುತ್ತದೆ. ನಾಟ್ಯಶಾಸ್ತ್ರವು 24 ಅಸಂಯುತ ಹಸ್ತಗಳನ್ನು ಪ್ರಸ್ತಾಪಿಸಿದರೆ, ಅಭಿನಯದರ್ಪಣ 28 ಹಸ್ತಗಳನ್ನು ವಿವರಿಸುತ್ತದೆ. ಆದರೆ ಬಹುಪಾಲು ಅಭಿನಯ ದರ್ಪಣದ ಬಳಕೆಯೇ ಹೆಚ್ಚು.

**ಪತಾಕ**



**ಲಕ್ಷಣ:–** ತೋರುಬೆರಳಾದಿಯಾಗಿ ನಾಲ್ಕುಬೆರಳನ್ನು ನೇರ–ವಾಗಿರಿಸಿ ಹೆಬ್ಬೆರಳನ್ನು ಮಡಿಸಿ ಹಿಡಿದರೆ ಆ ಹಸ್ತವು ಪತಾಕ–ವೆನಿಸುತ್ತದೆ. ಇದೊಂದು ಪುರುಷ ಹಸ್ತ. ಅಭಿನಯದರ್ಪಣದ

**ವಿನಿಯೋಗ:–** ನಾಟ್ಯದ ಆರಂಭಕ್ಕೆ ನಿಲ್ಲುವ ಕ್ರಮ, ಮೋಡಗಳು, ಕಾಡು, ವಸ್ತುಗಳನ್ನು ನಿಷೇಧಿಸುವುದು, ಕುಚಸ್ಥಲ(ಎದೆ), ರಾತ್ರಿ, ನದಿ, ದೇವಸಮೂಹ, ಕುದುರೆ, ಖಂಡನೆ (ತುಂಡರಿಸುವುದು) ವಾಯು (ಗಾಳಿ), ಶಯನ (ಮಲಗುವುದು), ಹೋಗುವುದು, ಪ್ರತಾಪ, ಮನೆ, ಬೆಳದಿಂಗಳು, ಬಿಸಿಲಿನ ತಾಪಕ್ಕೆ ಕಷ್ಟಪಡುವುದು, ಬಾಗಿಲು ಹಾಕುವುದು–ತೆರೆಯುವುದು, ಸಪ್ತವಿಭಕ್ತಿಯ ಅರ್ಥ ಸೂಚಿಸುವುದು, ಅಲೆಗಳು, ಬೀದಿ ಪ್ರವೇಶಿಸುವುದು, ಸಮಭಾವ, ಸುಗಂಧ ದ್ರವ್ಯಗಳನ್ನು ಪೂಸುವುದು, ತನ್ನನ್ನು ಸೂಚಿಸುವುದು, ಶಪಥ ಮಾಡುವುದು, ಮೌನ ಅಥವಾ ಸುಮ್ಮನಿರು ಎಂಬರ್ಥದಲ್ಲಿ, ಆಶೀರ್ವಾದ, ತಾಳೆಗರಿ

3. ಭರತನಾಟ್ಯ **commrcial** ಆಗಿ ಹೋಗುತ್ತಿದೆ ಎಂಬ ಮಾತಿದೆ. ಇದನ್ನು ಒಪ್ಪುತ್ತೀರಾ?

ಖಂಡಿತವಾಗಿ0ಯೂ..ಹಾಗಂತ commercial ಆಗುವುದು ಇಂದಿನ ಕಾಲಘಟ್ಟಕ್ಕೆ ಅನಿವಾ0ರ್ಯವೂ ಕೂಡಾ..ಏಕೆಂದರೆ ಇಂದಿನ ಹಲವು ಗುರುಗಳು ಖರ್ಚು ಮಾಡಿ ಪ್ರತಿಷ್ಠಿತರಲ್ಲಿ ಕಲಿತು ಬರುತ್ತಾರೆ.ಹಾಗೆ0ಯೇ ಶಿಷ್ಯರಿಂದಲೂ ಅದನ್ನು ನಿರೀಕ್ಷಿಸುತ್ತಾರೆ. ಜೊತೆಗೆ ಕಾ0ರ್ಯಕ್ರಮದ ಆ0ಯೋಜನೆಗಳ ಸಂದರ್ಭದಲ್ಲಿ ಎಲ್ಲಾ ಖರ್ಚನ್ನು ಗುರುಗಳು ಅಥವಾ ಸಂಸ್ಥೆ0ಯೇ ಭರಿಸಲಾಗುವುದಿಲ್ಲ. ಈಗಿನ ಕಾಲದಲ್ಲಂತೂ ಧರ್ಮಾರ್ಥ ಅನ್ನುವ ಮನೋಭಾವ ನಿರೀಕ್ಷೆ ಮಾಡುವುದೇ ಕಷ್ಟ... ಆದ್ದರಿಂದ commrcial ಆಗುವುದು ಅಪರಾಧವಲ್ಲ. ಆದರೆ ಅದು ಸುಲಿಗೆ0ಯಾಗಬಾರದು. ಅತೀ ಮಾಡುವುದು ಒಳ್ಳೆ0ಯದಲ್ಲ. ಮಿತಿ0ಯಲ್ಲಿದ್ದರೆ ಚೆಂದ.

4. **ಕಲಾವಿದೆ ಎಂದರೆ ನಿಮ್ಮ ದೃಷ್ಟಿ0ಯಲ್ಲಿ ಹೇಗಿರಬೇಕು** ?

ನರ್ತಕರ ಗುಣ, ಅವರ appearance ನೋಡಿ ಕಲಾವಿದರು ಅಂತ ಅಳೆ0ಯಲಿಕ್ಕಾಗುವುದಿಲ್ಲ. ಕಲಾವಿದರು ಮೃದು ವರ್ತನೆ, ಉತ್ತಮ ನಡೆನುಡಿ, ಸಂವಹನ ಕಲೆ0ಯನ್ನು ರೂಡಿಸಿಕೊಂಡಷ್ಟೂ ಒಳ್ಳೆ0ಯದು. ಆಧ್ಯಾತ್ಮಿಕ-ಪುರಾಣಗಳ ಬಗ್ಗೆ ಆಸಕ್ತಿ, ನೃತ್ಯಗ್ರಂಥಗಳ ತಿಳಿವಳಿಕೆ, ನೃತ್ಯ ಕಾ0ರ್ಯಕ್ರಮ ಕೊಡುವ ಮೊದಲು ಅದರ ಹಿನ್ನೆಲೆ, ಸಂಬಂಧಿತ ವಿಚಾರಗಳಲ್ಲಿ ಅರಿವು..ಇವೆಲ್ಲವೂ ಕಲಾವಿದರನ್ನು ಪ್ರಬುದ್ಧರನ್ನಾಗಿಸುತ್ತದೆ. ಇನ್ನೊಂದು ಮುಖ್ಯ ವಿಚಾರವೆಂದರೆ ಅಹಂ...ಕಲಾವಿದರು ಅಹಂಕಾರ ಬಾಧಿತರಾಗಿರಬಾರದು. ಅದು ಪರಿಣಾಮಕಾರಿ0ಯಾಗಿರಬೇಕೇ ವಿನ: ಕೆಳಮಟ್ಟದ ಸ್ಪರ್ಧೆಗೆ ಇಳಿ0ಯುವುದು, ಇನ್ನೊಬ್ಬರನ್ನು ನೋಯಿಸುವುದು, ತೊಂದರೆ ಮಾಡುವುದು..ಇತ್ಯಾದಿ ಭೂಷಣವಲ್ಲ.

5. **ಗುರುಕುಲ ಪದ್ಧತಿ0ಯ ಅಧ್ಯ0ಯನದ ಲಾಭ-ನಷ್ಟಗಳ ಬಗ್ಗೆ ತಿಳಿಸುತ್ತೀರಾ** ?

ಒಂದರ್ಥದಲ್ಲಿ ನೋಡಿದರೆ ಪರಿಪೂರ್ಣ ಕಲಾವಿದೆ ರೂಪುಗೊಳ್ಳುವುದೇ ಗುರುಕುಲ ಪದ್ಧತಿ0ಯ ಅಧ್ಯ0ಯನದಲ್ಲಿ. ಅಲ್ಲಿ ಕಲಿ0ಯುವವರಿಗೂ, ಕಲಿಸುವವರಿಗೂ ತಹತಹಿಕೆ, ಶ್ರದ್ಧೆ, ಏಕಾಗ್ರತೆ, ಕ್ರಮ, ಬದ್ಧತೆ ಎಲ್ಲವೂ ಇರುತ್ತದೆ. 0ಯಾವುದನ್ನು ಕಲಿ0ಯಬೇಕು ಅಂತ ಹೋಗಿರುತ್ತೇವೆ0ಯೋ ಅದಷ್ಟೇ ಅಲ್ಲದೆ, ಸಾಮಾಜಿಕ ಮತ್ತು ಇತರ ಬೋಧಪ್ರದ ವಿಚಾರಗಳ ಅವಲೋಕನ, ವಿಮರ್ಶನ ನಡೆ0ಯುತ್ತದೆ. ಸಚ್ಚಾರಿತ್ರ್ಯ ರೂಪಿಸುತ್ತದೆ. ಆದರೆ ಇಂದಿನ ದಿನಗಳಲ್ಲಿ ಗುರುಕುಲ ಪದ್ಧತಿ ತೀರಾ ವಿರಳ. ಮತ್ತು ನಿರೀಕ್ಷಿಸುವುದೂ ದುಸ್ತರ..

**...ಮುಂದಿನ ತಿಂಗಳ ಅತಿಥಿ ? ಕಾದು ನೋಡೋಣ ...**

• • • • • • • • • • •



ರಂಗ ಭ್ರಮರಿ

# ಅರಂಗೇಟ್ರಂ : ಒಂದು ನೋಟ

✍ 'ಮನೂ'ಬನ

ತಮಿಳಿನಲ್ಲಿ 'ಅರಂಗೇಟ್ರಂ' ಎಂದು ಕರೆಸಿಕೊಳ್ಳುವ ರಂಗಪ್ರದರ್ಶನವನ್ನು ಕನ್ನಡದಲ್ಲಿ ರಂಗಪ್ರವೇಶವೆಂದು ಕರೆ0ಯಲಾಗಿದೆ. ಭರತನಾಟ್ಯದ ಅಭ್ಯಾಸದಲ್ಲಿ ಮುಖ್ಯವಾಗಿ ಮೂರು ಹಂತಗಳಿರುತ್ತವೆ. ಮೊದಲನೆ0ಯದು ಸಾಧಕಪೂಜೆ ಅಂದರೆ ನೃತ್ಯ ಅಭ್ಯಾಸಕ್ಕೆ ತೊಡಗುವ ಕಾ0ರ್ಯಕ್ರಮ. ಎರಡನೆ0ಯದು ವದ್ದಿಗೆ ಪೂಜೆ' ಅಂದರೆ ಪೂಜೆ0ಯ ಬಳಿಕವೇ ಗೆಜ್ಜೆಕಟ್ಟಿಕೊಂಡು ಅಭ್ಯಾಸ ಮಾಡುವುದು. ಕೊನೆ0ಯದು "ಗೆಜ್ಜೆ ಪೂಜೆ" ಅಂದರೆ ನೃತ್ಯಾಭ್ಯಾಸದಲ್ಲಿ ಪರಿಪೂರ್ಣತೆ ಪಡೆದ ಮೇಲೆ ಸಾರ್ವಜನಿಕವಾಗಿ ಜರುಗುವ ಸಮಾರಂಭ. ಕಳೆದ ಮೂವತ್ತು ವರ್ಷಗಳ ವರೆಗೆ ದೇವದಾಸಿ0ಯರು ನರ್ತನ ಕಲೆ0ಯಲ್ಲಿ ಮಾಡಲೇ ಬೇಕಿದ್ದ ಸಂಸ್ಕಾರ ಕರ್ಮ ಗೆಜ್ಜೆ ಪೂಜೆ0ಯಾಗಿತ್ತು. ಅಂದು ಕಲಾವಿದೆ ಗೆಜ್ಜೆಗಳನ್ನು ಪೂಜೆಗಿಟ್ಟು ಆ ಬಳಿಕ ಗುರುವಿನ ಆಶೀರ್ವಚನ ಪಡೆದು ಅಲ್ಲಿ0ಯತನಕ ತಾನು ಕಲಿತ ನೃತ್ಯಬಂಧಗಳನ್ನು ಪ್ರದರ್ಶಿಸುತ್ತಾಳೆ. ಈಗೀಗ ಗೆಜ್ಜೆಪೂಜೆ0ಯ ಕ್ರಿಯೆಗಳನ್ನು ಆರಂಗೆಟ್ರಂ ಸಮಾರಂಭದಲ್ಲಿ0ಯೇ ಇರಿಸುತ್ತಾರೆ. ಉತ್ತಮ ದಿನವನ್ನು ನಿಷ್ಕರ್ಷಿಸಿ ಪ್ರಥಮ ಬಾರಿಗೆ ತಾನು ಕಲಿತು ಸಾಧಿಸಿದ ನರ್ತನ ವಿದ್ಯೆ0ಯನ್ನು ಸಭೆ0ಯ ಮುಂದೆ ಪ್ರದರ್ಶಿಸುವುದೇ ಅರಂಗೇಟ್ರಮ್. ನಾಟ್ಯ ಕಲಾವಿದೆ0ಯೆನಿಸಿಕೊಳ್ಳುವ 0ಯೋಗ್ಯತೆ ಪಡೆದಿದ್ದಾಳೆ ಎನ್ನುವುದೇ ಆಗ......

ನಾಟ್ಯಾಚಾ0ರ್ಯರು ನೃತ್ಯದ ಪ್ರಥಮ ಶಿಕ್ಷಣ ಕೊಡುವಾಗ ವಿದ್ಯಾರ್ಥಿಗೆ ಗೆಜ್ಜೆ ಕಟ್ಟಿ ಅಭ್ಯಸಿಸಲು ಅನುಮತಿಸುವುದಿಲ್ಲ; ಕಾರಣ, ಹೆಜ್ಜೆ ವಿನ್ಯಾಸಗಳನ್ನು ಖಚಿತ ದೃಢತೆ0ಯಿಂಡ ಮಾಡಬೇಕಾದರೆ ಗೆಜ್ಜೆ ಕಟ್ಟಿದರೆ ಸಹಕಾರಿ0ಯಾಗುವುದಿಲ್ಲ. ಗೆಜ್ಜೆ ಕಟ್ಟಿದ ಹೆಜ್ಜೆಗಳನ್ನು ಭೂಮಿ0ಯ ಮೇಲೆ ಸ್ವಲ್ಪ ತಟ್ಟಿದರೂ ಧ್ವನಿ ಬರುವ ಕಾರಣ ಗೆಜ್ಜೆ ಕಟ್ಟಿ ಪಾಠ ಮಾಡಿದಲ್ಲಿ ಹೆಜ್ಜೆವಿನ್ಯಾಸಗಳ ಸಂಪೂರ್ಣ ಅರಿವು ಆಗುವುದಿಲ್ಲ. ಆದ್ದರಿಂದ ಸ್ಪಷ್ಟವಾಗಿ ಹೆಜ್ಜೆ ತಟ್ಟಿ ಕಾಲನ್ನು ನೀಡಿ ಅಥವಾ ಮೆಟ್ಟಿ ನೃತ್ಯ ಬಂಧಗಳನ್ನು ಕಲಿತು, ನೃತ್ಯ ಪಾರಂಗತಳಾದ ಮೇಲೆ ಗುರುಗಳು ವಿದ್ಯಾರ್ಥಿಗೆ ಗೆಜ್ಜೆ ಕಟ್ಟಿ ಅಭ್ಯಾಸ ಮಾಡಿಸಿ ವಿದ್ಯಾರ್ಥಿ0ಯ ರಂಗಪ್ರವೇಶ ಮಾಡಿಸುತ್ತಾರೆ.

ದೇವದಾಸಿಗಳು ರಂಗಪ್ರವೇಶವನ್ನೇ ಗೆಜ್ಜೆ ಪೂಜೆ0ಯೆಂದು ಕರೆ0ಯುತ್ತಿದ್ದರು. ಅವರ ಜೀವನದಲ್ಲಿ ಮದುವೆ0ಯ ಸಮಾನವಾದ ಅಸಾಮಾನ್ಯ ಅನುಭವ ಅದು. ಕಲಾವಿದೆ0ಯ ಜಾತಕಕ್ಕೆ ಹೊಂದುವ ಒಂದು ಸುಲಗ್ನದ ದಿನ ಆಕೆ ಪ್ರಾತಃಕಾಲದಲ್ಲಿ ಎದ್ದು ತೈಲಾಭ್ಯಂಜನವಾದ ಮೇಲೆ ದೇವತಾಕಾ0ರ್ಯಗಳನ್ನು ಮುಗಿಸಿ ಸೂಕ್ತವಾದ ಶೃಂಗಾರ ಮಾಡಿಕೊಳ್ಳುತ್ತಿದ್ದಳು. ಗಟ್ಟಿ0ಯಾದ ನೂಲಿನಿಂದ ಕಟ್ಟಿದ ಗೆಜ್ಜೆಗಳ ಮಾಲೆ0ಯನ್ನು

ಹರಿವಾಣದಲ್ಲಿಟ್ಟು ನೆರೆದ ಹಿರಿಯ ವಿದ್ವಾಂಸರ ಹಸ್ತಸ್ಪರ್ಶ ಮಾಡಿಸಿ ಆಶೀರ್ವಾದ ಪಡೆದು, ಪದ್ಧತಿಯಂತೆ ಗುರುಗಳೇ ಸ್ವತಃ ಆಕೆಯ ಬಲಗಾಲಿಗೂ ನಂತರ ಎಡಗಾಲಿಗೂ ಕಟ್ಟುತ್ತಿದ್ದರು. 'ಪೂರ್ವರಂಗ ವಿಧಿಗೆ' ಹೆಚ್ಚಿನ ಪ್ರಾಮುಖ್ಯತೆಯೂ ಅಲ್ಲಿತ್ತು. ಕೊನೆಗೆ ನೆರೆದವರೆಲ್ಲರಿಗೂ ವೀಳ್ಯವನ್ನು ಕೊಟ್ಟು ಆಶೀರ್ವಾದವನ್ನು ಪಡೆಯುವುದು ಕ್ರಮ. ಅಂದಿನ ಕಾಲದ ಗೆಜ್ಜೆಪೂಜೆಗಳು ಇಂದಿನ ಕಾಲದಲ್ಲಿ ರೂಢಿಯಲಿಲ್ಲ. ಆದರೆ ದೇವದಾಸಿಯರೇ ಭರತನಾಟ್ಯವನ್ನು ಅಭ್ಯಸಿಸಿ ಉಳಿಸಿಕೊಂಡು ಬಂದಿದ್ದರಿಂದ ಗೆಜ್ಜೆಪೂಜೆಯ ಪವಿತ್ರ ಕಾರ್ಯಕ್ಕೆ ಕಳಂಕವೂ ಅಂಟಿಕೊಂಡಿತ್ತು.


ಈಗ ಕಲಾರಂಗದಲ್ಲಿ ಕಲಾವಿದೆಗೆ ಸ್ಥಾನ ಗೌರವ ಸಿಗಬೇಕೆಂದಾದರೆ ರಂಗಪ್ರವೇಶ ಕಾರ್ಯಕ್ರಮ ಅನಿವಾರ್ಯವೆನಿಸಿಕೊಂಡಿದೆ. ಸಾಮಾನ್ಯವಾಗಿ ಕಲಾವಿದೆಗೆ ಹಿರಿಯ ಕಲಾವಿದರ, ಕಲಾಭಿಮಾನಿಗಳ, ಹಿರಿಯ ವ್ಯಕ್ತಿಗಳ ಸ್ನೇಹ- ಸಂಪರ್ಕ, ಸೌಹಾರ್ದ ಸಹಾಯಗಳು ದೊರೆಯುವುದಕ್ಕೆ ರಂಗಪ್ರವೇಶ ಮಾಧ್ಯಮವೂ ಆಗಿದೆ. ಅಭಿವೃದ್ಧಿ ಹೊಂದುತ್ತಾ ಬರುವ ಹೊಸ ಕಲಾವಿದೆಯ ಮೇಲೆ ಜನತೆಗೆ ಸದಾ ಗಮನವಿರಲೆಂಬುದು ಅರಂಗೇಟ್ರಂನ ಉದ್ದೇಶಗಳಲ್ಲೊಂದು. ಸಂಗೀತಗಾರರು, ಸಾಹಿತಿಗಳು, ವಿವಿಧಕಲಾ ವಿದ್ವಾಂಸರು, ಕಲಾರಸಿಕರು, ಕಲಾಪೋಷಕರನ್ನು ಆಮಂತ್ರಿಸಿ ತುಂಬಿದ ಸಭೆಯೆದುರಿಗೆ ನೃತ್ಯಕಾರ್ಯಕ್ರಮ ನೀಡಿ ಮೆಚ್ಚುಗೆ ಪಡೆಯುವುದೇ ಅಲ್ಲಿ ಕಲಾವಿದೆಗೆ ಪ್ರಶಸ್ತಿ ಪತ್ರ...

ಸಾಮಾನ್ಯವಾಗಿ ಭರತನಾಟ್ಯದ ಮಾರ್ಗಪದ್ಧತಿ- ಅಂದರೆ ಅಲಾರಿಪು, ಜತಿಸ್ವರ, ಶಬ್ದಂ, ವರ್ಣಂ, ಜಾವಳಿ, ಕೀರ್ತನೆ, ಶ್ಲೋಕ, ತಿಲ್ಲಾನಗಳು, ರಂಗಪ್ರವೇಶದ ಮುಖ್ಯವಸ್ತುಗಳಾಗಿರುವುದು ರೂಢಿ. ಆದರೆ ಇತ್ತೀಚೆಗೆ ರಂಗಪ್ರವೇಶ ಕಾರ್ಯಕ್ರಮಗಳು ನವೀನ ಮಾದರಿಯ ನೀತಿಯನ್ನು ಅನುಸರಿಸಲು ಹೋಗಿ ಎಡವಿ ಬೀಳುತ್ತಿದೆ. ನೃತ್ಯಬಂಧಗಳ ಪ್ರದರ್ಶನದಲ್ಲಿ ಬದಲಾವಣೆ, ಕೆಲವು ನೃತ್ಯಬಂಧಗಳ ನಂತರ ಸಭಾಕಾರ್ಯಕ್ರಮದ ಮೂಲಕ ವಿಶ್ರಾಂತಿ, ಅಪರಿಪೂರ್ಣ ವಿನ್ಯಾಸ, ಅಬದ್ಧ ರಂಗಚಲನೆಗಳು ಈಗಿನ ಅರಂಗೇಟ್ರಂ ಕಾರ್ಯಕ್ರಮವನ್ನು ಕಳಪೆ ಮಾಡಿವೆ. ವೈಭವದ, ಶ್ರೀಮಂತಿಕೆಯ ಸೋಗನ್ನಷ್ಟೇ ಹಾಕುವ ಅರಂಗೇಟ್ರಂ ವಿದ್ವಾಂಸರ ತಾಣವಾಗುವುದಕ್ಕಿಂತ ಬಂಧು ಮಿತ್ರರ ಪ್ರತಿಷ್ಠಿತ ವ್ಯಕ್ತಿಗಳ ಭಟ್ಟಂಗಿತನಕ್ಕೆ ವೇದಿಕೆಯಾಗುತ್ತಿದೆ.

ಇಂದಿನ ಪರಿಸ್ಥಿತಿಯಲ್ಲಿ 'ಅರಂಗೇಟ್ರಂ' ವ್ಯಾಪಾರವಾಗಿ ಹೋಗಿದೆ ಎನ್ನುವ ಮಾತು ಅತಿಶಯವೇನಲ್ಲ. ಪ್ರತಿಭಾವಂತರಿಗೆ ವೇದಿಕೆ ಕಲ್ಪಿಸಿಕೊಡಬೇಕಿದ್ದ ಕಾರ್ಯಕ್ರಮ ಹಣ ಚೆಲ್ಲುವ ಸಿರಿವಂತರ ಪಾಲು. ಭೋಜನಕೂಟ, ಸತ್ಕಾರ, ಅತ್ಯಾಕರ್ಷಕ ರಂಗಸಜ್ಜಿಕೆ, ಫಲಾಹಾರ, ಅತ್ಯಾಧುನಿಕ ಬ್ರೋಷರ್ಸ್, ಪಾಂಪ್ಲೆಟ್ಸ್, ವೀಡಿಯೋ ಛಾಯಾಗ್ರಹಣ, ಹಿಮ್ಮೇಳದ ಭರಾಟೆ, ಉಡುಗೊರೆಗಳ ಕರಾಮತ್ತು ಶಾಸ್ತ್ರೀಯತೆಯನ್ನು ಮುಳುಗಿಸಿಬಿಟ್ಟಿವೆ. ನಾಟ್ಯರಂಗದಲ್ಲಿ ಗುರುಗಳಿಗೆ ಸಭಿಕರ ಮುಂದೆ ಗುರುದಕ್ಷಿಣೆ ಕೊಡುವ ಕಾರ್ಯಕ್ರಮವಂತೂ



# ದರ್ಶನ ಭ್ರಮರಿ



**ವಿದುಷಿ ರೂಪಾ ಶ್ರೀಕೃಷ್ಣ ಉಪಾಧ್ಯ :** ಯುವ ಭರತನಾಟ್ಯ ಗುರು ಮತ್ತು ಪ್ರಬುದ್ಧ ಕಲಾವಿದೆ. ಸಾಗರದ ವಿದ್ವಾನ್ ಜಿ.ಬಿ.ಜನಾರ್ಧನ್, ಬೆಂಗಳೂರಿನ ವಿದುಷಿ ಬಿ.ಕೆ.ವಸಂತಲಕ್ಷ್ಮೀ ಇವರ ಗರಡಿಯಲ್ಲಿ ಪಳಗಿದ ರೂಪಾ ಉಪಾಧ್ಯ ಭರತನಾಟ್ಯ ವಿದ್ವತ್ ಮತ್ತು ಎಂ.ಎ ರ್‍ಯಾಂಕ್ ವಿಜೇತೆ. ನಾಡಿನಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿರುವ ರೂಪಾ, ಹಲವು ಸನ್ಮಾನ, ಪ್ರಶಸ್ತಿ ಪುರಸ್ಕೃತರು. ಪ್ರಸ್ತುತ ಮಡಿಕೇರಿಯಲ್ಲಿ ನೃತ್ಯ ಮಂಟಪ ಟ್ರಸ್ಟ್ ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ಉತ್ತಮ ಆಶಯಗಳ ನೆಲೆಗಟ್ಟಿನಲ್ಲಿ ಸುಮಾರು 100ಕ್ಕೂ ಹೆಚ್ಚು ಮಂದಿಗೆ ಕಲಾಕ್ಷೇತ್ರ ಶೈಲಿಯಲ್ಲಿ ಭರತನಾಟ್ಯ ಮಾರ್ಗದರ್ಶನ ಮಾಡುತ್ತಿದ್ದಾರೆ. ಇವರು ಈ ತಿಂಗಳ ದರ್ಶನ ಭ್ರಮರಿಯ ಅತಿಥಿ...

**1. ಈಗಿನ ಭರತನಾಟ್ಯ ಕಾರ್ಯಕ್ರಮಗಳು ಮಾರ್ಗ ಪದ್ಧತಿಯನ್ನು ದಾಟಿ ಬೇರೆಯದೇ ಧಾಟಿಯಲ್ಲಿ ಮುಂದುವರಿಯುವ ಬಗ್ಗೆ ನಿಮ್ಮ ಅಭಿಪ್ರಾಯವೇನು?**

ಈಗಿನ ಬಹುಪಾಲು ಕಾರ್ಯಕ್ರಮಗಳು ನರ್ತಕರ ಸಾಮರ್ಥ್ಯ, ಹಾಗೂ ಸಮಯಾವಕಾಶಗಳನ್ನು ಆವಲಂಬಿಸಿಯೇ ನಡೆಯುವುದರಿಂದ ಮಾರ್ಗ ಪದ್ಧತಿಯಲ್ಲೇ ನಡೆಯಬೇಕು ಎಂದರೆ ಕಷ್ಟ. ಮಾರ್ಗ ಪದ್ಧತಿಯ ನಿಯಮಗಳಿಗೆ ಇಂದು ಯಾರೂ ಬದ್ಧರಾಗಿಲ್ಲ. ಶಾಸ್ತ್ರೋಕ್ತವಾಗಿ, ಶುದ್ಧವಾಗಿ, ಕ್ರಮಪ್ರಕಾರವಾಗಿ ಮಾಡುವುದಕ್ಕೇ ಹಿಂದೇಟು ಹಾಕುತ್ತಾರೆ. ಅದಕ್ಕೆ ಬೇರೆ-ಬೇರೆ ಕಾರಣಗಳಿರುತ್ತವೆ. ಕಾಲಕ್ಕೆ ತಕ್ಕಂತೆ ಬದಲಾಗುವುದು ಇಂದಿನ ಅನಿವಾರ್ಯತೆಗಳಲ್ಲೊಂದು.

**2. ಭರತನಾಟ್ಯದಲ್ಲಿ ಅನುಸರಿಸುವ ನೂತನ ವಿಧಾನ ಅಥವಾ ಬದಲಾವಣೆಗಳು ಹೇಗಿದ್ದರೆ ಚೆನ್ನ?**

ನೂತನ ಎಂದ ಕೂಡಲೇ ಹೇಗೇಗೋ ಮಾಡುವುದಲ್ಲ. ಅದಕ್ಕೂ ಚೌಕಟ್ಟು, ಶಾಸ್ತ್ರ ಕ್ರಮ ಬದ್ಧತೆಯ ನೀತಿಯಿದ್ದರೆ ಒಳ್ಳೆಯದು. ಜನರನ್ನು ತಲುಪುವ ನಿಟ್ಟಿನಲ್ಲಿ ನೂತನ ವಿಧಾನಗಳು ಅಗತ್ಯ. ಉದಾ: ಹೊರ ದೇಶಗಳಲ್ಲಿ ಕಾರ್ಯಕ್ರಮ ಕೊಡಬೇಕಾಗಿ ಬಂದಾಗ ಹಿಮ್ಮೇಳದ ಸಂಗೀತ, ನಿರೂಪಣೆ, ಮಂಡನಾ ಕೌಶಲ್ಯ...ಹೀಗೆ, ಸಣ್ಣ ಪ್ರಮಾಣದ ಬದಲಾವಣೆಗಳು ಅವಶ್ಯವಾಗುತ್ತವೆ. ಮುಖ್ಯವಾಗಿ ಸಾಹಿತ್ಯವೇ ಅರ್ಥವಾಗದೇ ಹೋದಲ್ಲಿ ವೀಕ್ಷಕರಿಗೆ ಆಸ್ವಾದನೆಯೂ ತ್ರಾಸದಾಯಕವಾಗುತ್ತದೆ. ಹಾಗಂತ ಪ್ರೇಕ್ಷಕರನ್ನು ತಲುಪುವುದಷ್ಟೇ ನೃತ್ಯ ಪ್ರದರ್ಶನಗಳ ಉದ್ದೇಶವಾಗಿರಬಾರದು. ಹಾಗಾದಲ್ಲಿ ನೃತ್ಯದ ಶಾಸ್ತ್ರೀಯತೆಗೆ ಖಂಡಿತಾ ಭಂಗ ಬರುತ್ತದೆ.

ನರ್ತಕರು ಮಾಡುವ ನೃತ್ಯವಿನ್ಯಾಸಗಳು ನಾಟ್ಯಪ್ರಾರಂಭದಲ್ಲಿ ಮಂಗಲಾಚರಣೆಗಾಗಿ ಅಧ್ಯಾತ್ಮ ದೇವತೆಗಳ ಪ್ರಾರ್ಥನೆಯಿಂದ ಕೂಡಿದ ಶಿಕ್ಷಾವಲ್ಲಿಯ ಶಾಂತಿಮಂತ್ರವನ್ನು ಅನುಕರಣೆ ಮಾಡುವ ನೃತ್ಯ".

ಅಲರಿಪುವನ್ನು 5 ಜಾತಿಗಳಲ್ಲಿ ಅಂದರೆ ಚತುರಶ್ರ, ತಿಶ್ರ, ಮಿಶ್ರ, ಖಂಡ ಹಾಗೂ ಸಂಕೀರ್ಣಗಳಲ್ಲಿ ಮಾಡುವ ರೂಢಿ. ಮೊದಲು ಅಲರಿಪು ಚತುರಶ್ರ ಜಾತಿಯ ರೂಪಕತಾಳದಲ್ಲಿ ಇತ್ತೆನ್ನಲಾಗಿದೆ. ಆದರೆ ಮಾಡಿದ್ದನ್ನೇ ಮಾಡುವ ಬದಲು ನವ್ಯತೆಯನ್ನು ಅನುಸರಿಸಿ ಆಲರಿಪುವಿನಲ್ಲೇ ಗತಿಭೇದಗಳು ಪ್ರಯೋಗಿಸಲ್ಪಟ್ಟು, ಹೆಚ್ಚು ಕಮ್ಮಿ ಆ ಚಲನ ವಲನಗಳನ್ನು ಅನುಸರಿಸುತ್ತಾ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಂಡು ಬೇರೆಬೇರೆ ಜಾತಿಗಳಲ್ಲಿ ನಡೆಸಿದ್ದರಿಂದ ಇತರ ಜಾತಿಯ ಅಲರಿಪು ಪ್ರಯೋಗವಾಯಿತೆನ್ನಲಾಗಿದೆ. ಇತ್ತೀಚೆಗೆ ಕೆಲವರು ಈ ಅಲರಿಪುವಿನ ಹಿನ್ನೆಲೆಗೆ ವಿಶಿಷ್ಟ ರೀತಿಯೆಂದು ತಾಳ ರಾಗಕ್ಕೆ ಹೊಂದುವ ಬೇರೆ ಬೇರೆ ಹಾಡುಗಳನ್ನು ಜೋಡಿಸಿ ನರ್ತಿಸುತ್ತಾರೆ.

ಅಲಂಕಾರದ ಏಳು ತಾಳಗಳಲ್ಲಿ, ಐದು ಜಾತಿಯಲ್ಲಿ ಅಂದರೆ ಒಟ್ಟು 35 ಬಗೆಗಳಲ್ಲಿ ಯಾವುದಾದರೊಂದರ ಅಡಿಪಾಯದ ಮೇಲೆ ಅಲರಿಪುವನ್ನು ಸಂಯೋಜಿಸಬಹುದು. ಹೆಚ್ಚಾಗಿ ಪ್ರಚಲಿತವಿರುವ ಅಲಾರಿಪುಗಳೆಂದರೆ ತಿಶ್ರ, ಚತುರಶ್ರ, ಮಿಶ್ರ, ಜಾತಿಯವು. ಸಾರಂಗದೇವ ತನ್ನ ಸಂಗೀತರತ್ನಾಕರ (1230)ದಲ್ಲಿ ಹತ್ತು ದೇಶಿಲಾ ಸ್ಯಾಂಗಗಳನ್ನು ತಿಳಿಸುವಾಗ, ಮೊದಲನೆಯದಾಗಿ ಚಲಿ ಅಂದರೆ ಚಲನ ಎಂಬ ಶಬ್ಧವನ್ನು ಉಪಯೋಗಿಸುತ್ತಾನೆ. ದೇಹಾಂಗಗಳ ಚಲನೆಗಳು ಲಾಲಿತ್ಯ ಪೂರ್ಣವಾಗಿ ಮೃದು ಮಧುರವಾಗಿ ತ್ರಶ್ಯ ಗತಿಯಲ್ಲಿರತಕ್ಕದು. ಇದು ಅಲರಿಪುವಿನೊಂದಿಗೆ ಹೊಂದುತ್ತದೆ ಎಂಬ ಅಭಿಪ್ರಾಯ ಅವನದ್ದು. ಮೇಲತ್ತೂರಿನ ಭರತಂ ಕಾಶೀನಾಥಯ್ಯ (1690–1764) ಅವರು 9 ಅಲರಿಪುಗಳನ್ನು ಬೇರೆ ಬೇರೆ ತಾಳಗಳಲ್ಲಿ ಬರೆದಿದ್ದಾರೆ ಎನ್ನಲಾಗಿದೆ. ಅವುಗಳಲ್ಲಿ ದ್ವಿರಾಜಶೇಖರ, ಶಶಾಂಕ, ಮತ್ತು ಮದನಕುಂಜಿರವೆಂಬ ಹೆಸರುಗಳೂ ಮತ್ತು ತ್ರಿಪುಟ, ಅಟ್ಟ, ಝುಂಪೆ, ಆದಿತಾಳಗಳಲ್ಲೂ ಇವೆ. ಇವೆಲ್ಲವೂ ತಾಳದ ಮೂರು ನಡೆಗಳಲ್ಲಿ ಮುಕ್ತಾಯ ಸಹಿತವಾಗಿವೆ.

ಸಾಮಾನ್ಯವಾಗಿ ಒಂದು ವರ್ಷಗಳ ಕಾಲದ ಪ್ರಾರಂಭಿಕ ಅಡವುಗಳ ಪಾಠ ಮುಗಿದ ನಂತರ ವಿದ್ಯಾರ್ಥಿ ಅಲರಿಪುವನ್ನು ಕಲಿಯಲು ತಯಾರಾಗುತ್ತಾರೆ. ಇತ್ತೀಚೆಗಿನ ದಿನಗಳಲ್ಲಿ ಕೆಲವು ಕಲಾವಿದರು ಅಲರಿಪುವನ್ನು ಮತ್ತಷ್ಟು ಶೃಂಗರಿಸುವ ಉದ್ದೇಶದಿಂದಲೋ ಏನೋ ಅಡವುಗಳನ್ನು ತೆಗೆದು ಅನಾವಶ್ಯಕವಾದ ನೃತ್ಯ ಭಂಗಿಗಳನ್ನು ಕೂಡಿಸುತ್ತಿದ್ದಾರೆ. ಇಂತಹ ಪ್ರಯತ್ನಗಳು ಅಲಂಕಾರ ಪ್ರಾಯವಾದರೂ ನೃತ್ಯದ ಮೂಲ ಉದ್ದೇಶವನ್ನು ಸಾಧಿಸುವಲ್ಲಿ ಖಂಡಿತಾ ವಿಫಲಗೊಳ್ಳುತ್ತವೆ.



ಚಿನ್ನ, ವಜ್ರಗಳ ಅಳತೆಗೋಲಿನಲ್ಲಿಯೇ ನಿರ್ಧಾರವಾಗುತ್ತಿದೆ. ಇಂತದ್ದೇ, ಇಷ್ಟೇ ಕೊಡಬೇಕು ಎಂಬ ಆಗ್ರಹ, ಪ್ರತಿಷ್ಠೆ ತೋರಿಸಲು ಅರಂಗೇಟ್ರಂ ಒಳ್ಳೆಯ ಉದಾಹರಣೆ ಎನಿಸಿಕೊಳ್ಳುತ್ತಿದೆ. ಇಂದಿಗೆ ಅರಂಗೇಟ್ರಂ ಎಂದರೆ ಹಣ ಮಾಡುವುದು, ವಿಜೃಂಭಣೆ. ಶಿಸ್ತು–ಪರಿಪೂರ್ಣತೆ–ಗುರುಭಕ್ತಿಯ ಮಾಯವಾಗುತ್ತಾ, ವೆಚ್ಚದ ವೇಷಭೂಷಣಗಳು, ಅಲಂಕಾರ, ಸೌಂದರ್ಯವಷ್ಟೇ ಮಾನದಂಡವಾಗುತ್ತಾ ಪೂಜನೀಯಭಾವ ಕಣ್ಮರೆಯಾಗುತ್ತಿದೆ. ಪಕ್ಕವಾದ್ಯ ನುಡಿಸುವವರಿಗೂ ನಡೆಸುವ ಸನ್ಮಾನ ಕಾರ್ಯಕ್ರಮ ಅತಿರಂಜಿತಗೊಳ್ಳುತ್ತಿದೆ.

ರಂಗಪ್ರವೇಶ ಮಾಡುವ ಬಹುಪಾಲು ಕಲಾವಿದೆಯರು ಪ್ರತಿಭಾವಂತ ಸೃಜನಶೀಲ ವ್ಯಕ್ತಿಗಳಾಗಿರುವ ಬದಲು ಗಿಣಿಪಾಠ ಒಪ್ಪಿಸುವ ಕಲಾವಿದೆಯರಾಗುತ್ತಿರುವುದು ದುರದೃಷ್ಟಕರ. ಸಾಮಾನ್ಯವಾಗಿ ಕಲಾವಿದೆಯು ಸುಮಾರು 3 ಗಂಟೆಗಳಷ್ಟು ಕಾಲ ಸಮರ್ಥವಾಗಿ ಯಾವುದೇ ದೇಹಾಯಾಸಗಳಿಲ್ಲದೆ ಲೀಲಾಜಾಲವಾಗಿ ನರ್ತಿಸಲು ಶಕ್ತವಾದರೆ 'ರಂಗಪ್ರವೇಶ' ಮಾತು ಸಾರ್ಥಕ್ಯ. ಆದರೆ ಎಷ್ಟೋ ಮಂದಿ ನಿರ್ದಿಷ್ಟ ಸಮಯದ ವರೆಗೆ ನರ್ತಿಸಲಾಗದೇ ಅರ್ಧದಲ್ಲೇ ಬಳಲಿ ನೇಪಥ್ಯಕ್ಕೆ ಓಡಿ ಬಂದವರಿದ್ದಾರೆ.

ಪ್ರೌಢ ಕಲಾವಿದರು ಮಾಡಬೇಕಾದ ಅರಂಗೇಟ್ರಂನ್ನು ಪುಟ್ಟ ಮಕ್ಕಳಿಂದ ಮಾಡಿಸುವ ನಾಟ್ಯಗುರುಗಳ ಕ್ರಮವಂತೂ ನರ್ತನವಿದ್ಯೆಗೇ ಅಣಕ! ಕಲಾವಿದೆಯ ಅರ್ಹತೆಗಿಂತ ಗುರು– ವಿದ್ವಜ್ಜನರನ್ನು ಕರೆಸಿ ನಡೆಸಿಕೊಳ್ಳುವ ವೈಭವವೇ ಇಂದಿನ ಮಾನದಂಡ! ಜೊತೆಗೆ ಇಂದು ಎಷ್ಟೋ ಕಲಾವಿದರು(?) ರಂಗಪ್ರವೇಶ ಮಾಡಿ ತೆರೆಮರೆಗೆ ಸರಿಯುತ್ತಿರುವುದು ಖೇದಕರ. ಹಾಗಾದಾಗ ಪ್ರತಿಷ್ಠೆಯ ಪ್ರದರ್ಶನದ ಮುಂದೆ ಕಲಾಸೇವೆಯು ಮುಖ್ಯವಾಗಿಲ್ಲ ಎನ್ನುವುದು ಖಾತ್ರಿಯೇ ಸರಿ.

ಏಕವ್ಯಕ್ತಿಯಿಂದ ಪ್ರಯೋಗಿಸಲು ಅರ್ಹವಾದ ಅರಂಗೇಟ್ರಂನಲ್ಲಿ ಇಂದು ನೃತ್ಯಗಳ ಅಭ್ಯಾಸ ಹಾಗೂ ಪ್ರಯೋಗಕ್ಕೆ ಇರುವ ಕ್ರಮ ಮೀರಲಾಗುತ್ತಿದೆ. ನಿರ್ಣಿತ, ನಿರ್ದಿಷ್ಟ ಚಲನವಲನಗಳಿಂದ ನೃತ್ಯಪ್ರೌಢಿಮೆಯನ್ನು ಪ್ರಯೋಗಿಸುವುದನ್ನು ಬಿಟ್ಟು 'ಶಾಸ್ತ್ರೀಯ ನೃತ್ಯಗಳ ರಂಗಪ್ರವೇಶ' ಎಂಬ ಫಲಕ ಅಂಟಿಸಿಕೊಳ್ಳುತ್ತಾ ಯಾವೊಂದು ಶಾಸ್ತ್ರೀಯ ನೃತ್ಯದ ಮಾರ್ಗಕ್ಕೂ ಬದ್ಧರಾಗದೇ variety ತೋರಿಸಲು ಹೋದ ಸಂದರ್ಭಗಳೂ, ಮತ್ತು ಅದನ್ನೇ ಶಹಬ್ಬಾಸ್ ಎನ್ನುವ ಬುದ್ದಿವಂತರ ಗುಂಪುಗಳೂ ಬೇಕಾದಷ್ಟಿವೆ. ಕೆಲವೊಂದು ಅರಂಗೇಟ್ರಂ ಪತ್ರಕರ್ತರನ್ನೇ ಪ್ರಮುಖ ಉದ್ದೇಶವನ್ನಾಗಿರಿಸಿಟ್ಟು ನಡೆದದ್ದೂ ಇದೆ.!

"ಸರಿಯಾಗಿ ಸಹೃದಯರು, ವಿದ್ವಾಂಸರ ಎದುರಿಗೆ ಮನೆಯಲ್ಲಿ ಮಾಡಿಸಿದರೂ ಸಾಕು. ರಂಗ ಪ್ರವೇಶ ಆಡುವರು, ಮಾಡಿಸುವರು ಇದ್ದಾರೆಯೇ ವಿನಃ ನೋಡುವವರ ಸಂಖ್ಯೆ ತೀರ ವಿರಳವಾಗುತ್ತಿದೆ. ದೊಡ್ಡಪ್ಪ, ದೊಡ್ಡಮ್ಮ, ಅತ್ತೆ, ಮಾವ.... ಹೀಗೆ

ಬಂಧುಮಿತ್ರರು ಮುಖಸ್ತುತಿ ಮಾಡಿದರೆ ಸಾಕೇ?" ಎಂದು ಪ್ರಶ್ನಿಸುತ್ತಾರೆ ಶತಾವಧಾನಿ ಡಾ॥ ಗಣೇಶ್.

ಮೊದಲೆಲ್ಲಾ ರಂಗಪ್ರವೇಶ ಕಾರ್ಯಕ್ರಮ ದೇವಾಲಯದಲ್ಲಿ, ಗುರುಮನೆಯಲ್ಲಿ ನಡೆಯುವುದು ರೂಢಿ. ಭರತ' ಮತ್ತು 'ನಾಟ್ಯ' ಎಂಬ ಶಬ್ದಾರ್ಥದ ಸಕಲ ಸಂಪದವೂ 'ಅರಂಗೇಟ್ರಂ' ಎಂಬ ಭಾವನೆ ಮೊದಲಿತ್ತು. ಇದು ಉಳಿದು ಬಂದ ಮಾರ್ಗವನ್ನು ಗಮನಿಸುವಾಗ ಎಂಟು ವರ್ಷಗಳ ಸತತ ಕಠಿಣ ಶ್ರಮ ಸಾಧನೆಯಿಂದಲ್ಲದೆ ಸಾಧ್ಯವಾಗದಾಗಿತ್ತು. ಆದರೆ ಈಗ ಬಹುವೆಚ್ಚದ ಸಭಾಂಗಣಗಳೇ ರಂಗಪ್ರವೇಶದ ಗುಣಮಟ್ಟ ಅಳೆಯುವ ಆಧಾರ!.ಕಲಿಯುವ ಪ್ರಾರಂಭಿಕ ಹಂತದಲ್ಲೇ ಅರಂಗೇಟ್ರಂನ ಯೋಚನೆ! ಜೊತೆಗೆ ಜನರಂಜನೆಯೇ ಮುಖ್ಯ ದೃಷ್ಟಿಯಾಗುತ್ತಾ ಸಾಗಿದುದರಿಂದ ಕೊರವಂಜಿ, ಜಾನಪದ, ಲಘು ನೃತ್ಯಗಳು ಅರಂಗೇಟ್ರಂನಲ್ಲಿ ಸೇರಿಕೊಂಡಿವೆ. ಜೊತೆಗೆ 'ಗುರುವಂದನಂ' ಎನ್ನುತ್ತಾ ರಂಗಪ್ರವೇಶಕ್ಕೆ ಮತ್ತೊಂದು ಸಾಧ್ಯತೆ ನೀಡುತ್ತಿರುವ ಕಾರ್ಯಕ್ರಮಗಳು ಜಾಳುಜಾಳಾಗಿ ಹೋಗುತ್ತಿದೆ. ಆದರೆ ಅಲರಿಪುವೇ ಮೊದಲ ನೃತ್ಯವಾಗಿದ್ದರೂ ಕೌತ್ವಂ, ತೋಡೆಯ ಮಂಗಳಂ ಮುಂತಾದವುಗಳನ್ನು ಅಳವಡಿಸುವುದು ಗುಣಾತ್ಮಕ ನವ್ಯ ರೀತಿ.

ರಂಗ ಪ್ರವೇಶ ಎಂಬ ಮಾತುಗಳು ಇಂದು ಎಷ್ಟೋ ಬಡ ಪ್ರತಿಭಾವಂತರ ಪಾಲಿಗೆ ನುಂಗಲಾರದ ತುತ್ತು. ಸಾಧನೆಯ ಫಲಕಗಳು, ಪ್ರತಿಭೆ, ನೃತ್ಯ ಸೇವೆ ಮಾಡುವ ಹಂಬಲವಿದ್ದರೂ ರಂಗಪ್ರವೇಶವಾಗದೇ ಹೋದಲ್ಲಿ ನರ್ತನ ಜಗತ್ತಿನಲ್ಲಿ ನೋಡುವ ದೃಷ್ಟಿಕೋನವೇ ಬೇರೆಯಾಗುತ್ತಿದೆ. ಕಲಾವಿದೆ ಹೇಗೆ ಕುಣಿದರೂ ಪರವಾಗಿಲ್ಲ, ರಂಗಪ್ರವೇಶ ಆಗಿದೆ ಎಂದಾದರೆ ಅದೊಂದು ಕಿರೀಟ ಎಂದು ಭಾವಿಸುವುದೇ ಹೆಚ್ಚು ! ಅಲ್ಲದೆ ಗುರುದಕ್ಷಿಣೆಯ ಅಪೇಕ್ಷೆ ಮಿತಿ ದಾಟುತ್ತಿರುವುದು ಬಡ ಪ್ರತಿಭಾವಂತ ಕಲಾವಿದರಲ್ಲಿ ಆತಂಕ ಹುಟ್ಟಿಸಿದೆ. ಖರ್ಚುವೆಚ್ಚದ ಸರಣಿ ನೋಡಿದಾಗ, ಕಲಾವಿದೆಗೆ ನೃತ್ಯದೊಂದಿಗೆ ಮದುವೆ ಎನ್ನುವುದಕ್ಕಿಂತ, ಮದುವೆ ಮಾಡುವುದಕ್ಕಿಂತಲೂ ಹೆಚ್ಚಿನ ಖರ್ಚು ಅನ್ನುವುದು ಸೂಕ್ತ. ಒಟ್ಟಿನಲ್ಲಿ ಬಡ ಪ್ರತಿಭಾವಂತ ಕಲಾವಿದರಿಗೆ ರಂಗಪ್ರವೇಶವೆಂಬುದು ಮರೀಚಿಕೆಯಾಗುತ್ತಿದೆಯಷ್ಟೇ!

ಕೆಲವು ಬೆರಳೆಣಿಕೆಯ ಸಂಘ ಸಂಸ್ಥೆಗಳು ಬಡ ಪ್ರತಿಭಾವಂತರಿಗೆ ರಂಗ ಪ್ರವೇಶದ ಭಾಗ್ಯವನ್ನು ಒದಗಿಸಿಕೊಡುತ್ತಿರುವುದು ಸಂತಸವಾದರೂ, ನಿರೀಕ್ಷಿತ ಮಟ್ಟವನ್ನು ಮುಟ್ಟುವಲ್ಲಿ ಅವುಗಳೂ ವಿಫಲವಾಗುತ್ತಿದೆ ಎಂದರೆ ತಪ್ಪಾಗಲಾರದು.

ರಂಗ ಪ್ರವೇಶದ ಯಾವ ವಿಧಿಯಲ್ಲೂ ಇಷ್ಟೇ ಖರ್ಚು ಮಾಡಬೇಕು, ಹೀಗೇ ದಕ್ಷಿಣೆ, ಸತ್ಕಾರ ಕೊಡಬೇಕು ಎಂದು ಹೇಳಿಲ್ಲ. ಅದೆಲ್ಲಾಜನರು ರೂಢಿಸಿಕೊಂಡದ್ದು. ಕಡಿಮೆ ಖರ್ಚಿನಲ್ಲಿ, ಹೆಚ್ಚು ಶಿಸ್ತು, ಸಾಂಪ್ರದಾಯಿತೆಯಲ್ಲಿ, ಉತ್ತಮ ಗುಣಮಟ್ಟವನ್ನಿಟ್ಟು



ಆರಂಭಿಸತಕ್ಕದೆಂದು ಶಾಸ್ತ್ರವಾಕ್ಯ. **'ತತ್'** ಬ್ರಹ್ಮವಾಚಕ ಶಬ್ಧ, ನಾಟ್ಯವೆಂಬುದು ಯಜ್ಞಸದೃಶ ಕರ್ಮ ಎನ್ನಲಾಗಿದೆ. ಬ್ರಹ್ಮವಸ್ತುವನ್ನು ಕುರಿತಾದ ಶಬ್ಧದಿಂದ ಆರಂಭವಾಗುವ ನಾಟ್ಯಯಜ್ಞದ ಅಂಗವಿನ್ಯಾಸಗಳು ಆಧ್ಯಾತ್ಮ ಅನುಭಾವವನ್ನು ಪ್ರತಿನಿಧಿಸುತ್ತದೆ. ಉಳಿದಂಶಗಳು ಪ್ರೇಕ್ಷಕರ ರಂಜನಾರ್ಥವಾಗಿ ಸೇರಿಸಿರುವ ಕ್ರೀಡಾಕೌಶಲ ಭಾಗಗಳು.

ವಿಮರ್ಶಕರು ಅಲರಿಪುವಿನ ಬಗೆಗೆ 2 ರೀತಿಯಲ್ಲಿ ಹೇಳಿಕೆ ಕೊಡುತ್ತಾರೆ:

1. ರಂಗಸ್ಥಳದ ಮಧ್ಯದಲ್ಲಿ ಸ್ವಯಂಬ್ರಹ್ಮನೇ ಸ್ಥಿತನಾಗಿರುವ ಕಾರಣದಿಂದ ರಂಗಸ್ಥಳ ಮಧ್ಯದಲ್ಲಿ ಪುಷ್ಪವೃಷ್ಟಿ ಕ್ರಿಯೆಯು ಮಾಡಬೇಕೆಂಬ ನಾಟ್ಯಶಾಸ್ತ್ರದ ಸೂಚನೆಯನ್ನು ಗಮನದಲ್ಲಿರಿಸಿದರೆ 'ಅಲರ್' ಎಂಬ ಶಬ್ದವು ಪುಷ್ಪಮೋಕ್ಷಣವೆಂಬ ಅರ್ಥವನ್ನು ಸೂಚಿಸಲು ಬಳಸಿಕೊಂಡಿರುವ ಮಾತು.

**ಅಲರಿಪುವಿನಲ್ಲಿ ಬಳಸುವ ಚಲನೆಗಳು ಮತ್ತು ದೇವತಾಶಕ್ತಿಗಳು**

- ಅಂಜಲಿ ಮುದ್ರೆಯಿಂದ ನಮಸ್ಕಾರ ಮತ್ತು ಕಣ್ಣು ಬಲ ಮತ್ತು ಎಡಕ್ಕೆ ಚಲಿಸುವುದು -> ಸೂರ್ಯ ಚಂದ್ರರಿಗೆ ವಂದಿಸಿದಂತೆ
- ಪಾರ್ಶ್ವಗಳಲ್ಲಿ ವಿನ್ಯಾಸ ಮಾಡುವ ಮುಕುಳ ಹಸ್ತ -> ವರುಣನಿಗೆ ವಂದಿಸಿದಂತೆ
- ಭುಜದ ಚಲನೆ ಅಥವಾ ಬಲಶಕ್ತಿ -> ಇಂದ್ರನಿಗೆ ವಂದನೆ
- ಭುಜಪ್ರದೇಶದ ಸುತ್ತಲೂ ಕೈಗಳು ಚಲಿಸುವುದು -> ಗುರುವಿಗೆ ಅಥವಾ ಬೃಹಸ್ಪತಿಗೆ ವಂದನೆ
- ವಿಸ್ತೀರ್ಣವಾಗಿ ಹೆಜ್ಜೆಯಿಡುವ ಪಾದ ಅರ್ಧಪತಾಕ ಹಸ್ತಮುದ್ರೆ ಹಿಡಿದು ದಿಧಿತ್ತೈ, ಧಿದಿತ್ತೈ ಅಡವು ಉರುಕ್ರಮಗಳು -> ವಿಷ್ಣುವಿಗೆ ವಂದನೆ
- ಮೂರನೆಯ ಕಾಲದಲ್ಲಿ ತಾಂದಿತ್ತಾತೈತತ್ತೈ ಎಂಬ ಜತಿಗೆ ಚಲಿಸುವ ಹಸ್ತ -> ವಾಯುವಿಗೆ ವಂದನೆ
- ನಿಂತು ಮತ್ತು ಕುಳಿತು ಭುಜದ ಸುತ್ತಲೂ ಅಲಪದ್ಮ ಹಸ್ತವನ್ನು ಹೃದಯದ ಸಮೀಪದಿಂದ ಚಲಿಸುವುದು -> ಬ್ರಹ್ಮನ ವಿಶ್ವವ್ಯಾಪಕತೆಗೆ ನಮನ

2. ಮಂಗಲಾಚರಣೆಯನ್ನು ನಾಂದೀರೂಪದಲ್ಲಿ ಪ್ರದರ್ಶಿಸಬೇಕಾಗಿರುವುದರಿಂದ ಪುಷ್ಪಮೋಕ್ಷಣೆಯ ನಂತರ ನೃತ್ಯವು ನಾಂದೀ ರೂಪದ ಶ್ರುತಿಸಮ್ಮತವಾದ ಪ್ರಾರ್ಥನೆಯನ್ನು ಉದ್ದೇಶವಾಗಿಟ್ಟು ರಚಿಸಿರುವ ಕ್ರೀಡೆ.

ಈ ನಿಟ್ಟಿನಲ್ಲಿ ವಿಮರ್ಶಕ ವಿ.ಎಸ್. ಕೌಶಿಕ್‌ರು ಈ ಅಭಿಪ್ರಾಯಕ್ಕೆ ಬರುತ್ತಾರೆ "ಅಲರಿಪು ಎಂಬ ನೃತ್ಯವು ಪುಷ್ಪಮೋಕ್ಷಣವೆಂಬ ಅರ್ಥವನ್ನು ಮಾತ್ರ ಸೂಚಿಸಿ, ಅನಂತರದಲ್ಲಿ

3. ಸಭೆಗೂ ರಂಗಮಂದಿರಕ್ಕೂ ನಮಸ್ಕರಿಸಿ ಪ್ರಾರ್ಥಿಸುವುದು ಎಂದಾದರೆ ಮೊದಲೇ ತಿಳಿಸಿದಂತೆ ಶ್ಲೋಕ, ಸ್ತೋತ್ರ , ಸಾಹಿತ್ಯಾಭಿನ0ಯ ಇಲ್ಲಿಲ್ಲ.

4. ಮುಂದಿನ ಕಾ0ರ್ಯಕ್ರಮಕ್ಕೆ ಶರೀರದ ಅಂಗಾಂಗಳು ಬಲಗೊಳ್ಳಲು ಮಾಡುವ ವ್ಯಾ0ಯಾಮ ಎಂದಾದರೆ ಇದು ಕೃತಕ ಅಭಾಸಕರ ಹೇಳಿಕೆ. ವ್ಯಾ0ಯಮ ಎನ್ನುವುದಾದರೆ ತ್ರಿಕಾಲಗಳೇಕೇ ಬೇಕು? ಮತ್ತು ಹಲವು ವರ್ಷಗಳ ನಿರಂತರ ಅಭ್ಯಾಸದಿಂದ ರಂಗಮಂದಿರದಲ್ಲಿ ಪ್ರದರ್ಶನಕ್ಕೆ ಸಿದ್ಧಳಾಗಿ ಬಂದಿರುವ ಕಲಾವಿದೆ0ಯು ಸಭಾಸದರ ಎದುರಿನಲ್ಲಿ ವ್ಯಾ0ಯಾಮ ಪ್ರಾರಂಭಿಸುತ್ತಾಳೆ ಎಂಬ ವಿವರಣೆ0ಯು ಅಪಹಾಸ್ಯಕ್ಕೆ ದಾರಿಮಾಡಿಕೊಡುತ್ತದೆ0ಯಲ್ಲವೇ?.".ಹೀಗೆ..

ಆದ್ದರಿಂದ ವಿದ್ವಾಂಸರು ಬೇರೆ0ಯೇ ಆದ ಅಭಿಪ್ರಾ0ಯ ಕೊಡುತ್ತಾರೆ. ಅಲರಿಪು ಎಂಬುದು ಪ್ರಾರ್ಥನಾ ರೂಪದ ನೃತ್ಯವಾದರೂ, ಪ್ರ0ಯೋಗದ ಪ್ರಾರಂಭದಲ್ಲಿ ಎಂಟು ವಿಧವಾದ ಪದಗಳಿಂದ ಕೂಡಿದ, ವಿಚಿತ್ರವಾದ ವೇದವಾಕ್ಯಗಳಿಂದ ಸಮ್ಮಿಳಿತಗೊಂಡ ನಾಟ್ಯವು ಇಂದ್ರನ ಸಭೆ0ಯಲ್ಲಿ ನಡೆಯಿತಂತೆ. ನಾಟ್ಯ ಪ್ರಾರಂಭದಲ್ಲಿ ಪ್ರಾರ್ಥನೆ0ಯು ಮಂಗಳಕರವಾಗಬೇಕೆಂಬ ಉದ್ದೇಶವೂ  ಮತ್ತು ಆ ಉದ್ದೇಶವು ಇಲ್ಲವಾದಲ್ಲಿ ಅದು ವೇದವಿರುದ್ಧವೂ ಎಂದು ಕಾಣಿಸಿಕೊಡಲಾಯಿತಂತೆ. ಮಂಗಲಾಚರಣವೆಂದರೆ ಪಕ್ಷಪಾತ ರಹಿತವೂ, ನ್ಯಾ0ಯವೂ, ಸತ್ಯವೂ, ಶ್ರುತಿಸಮ್ಮತವೂ ಆದ ಆಜ್ಞೆ0ಯನ್ನು 0ಯಥಾವತ್ತಾಗಿ ಸದಾ ಆಚರಿಸುವುದು ಕ್ರಮ. ನೃತ್ಯಸಂ0ಯೋಜನೆ0ಯು ಭರತಾಚ0ರ್ಯನು ತಿಳಿಸಿದಂತೆ

1) ವೇದವಿದ್ಯೆ0ಯಾಗಿರಬೇಕು
2) ಕ್ರೀಡೆ0ಯಾಗಿರಬೇಕು
3) ಮನೋರಂಜನೆ0ಯಾಗಿರಬೇಕು
4) ದೃಶ್ಯವಾಗಿರಬೇಕು
5) ಶ್ರಾವ್ಯವಾಗಿರಬೇಕು
6) ಸಾರ್ವಜನಿಕವಾಗಿರಬೇಕು

ಎಂಬ ಈ ಆರು ಅಂಶಗಳನ್ನು ಗಮನದಲ್ಲಿರಿಸಿ, ಸಾಂಪ್ರದಾಯಿಕ ಆಚಾ0ರ್ಯ ಶ್ರೇಷ್ಠರು ನೃತ್ಯವನ್ನು ರೂಪಿಸಬೇಕಾದ ಜವಾಬ್ದಾರಿ0ಯನ್ನು ಹೊತ್ತರು. ಅಂತೆ0ಯೇ ಅಲಂಕಾರ, ಗೀತೆ0ಯ ಸ್ವರಸ್ಥಾನದಲ್ಲಿ ಲ0ಯಗತಿ ಪ್ರಧಾನವಾದ **'ತತ್ ತಳಾಂಗು ತಧಿಗಿಣತೊಂ'** ಈ ಮೊದಲಾದ ತತ್ಕಾರಪೂರ್ವಕವಾದ ಶಬ್ಧಗಳನ್ನು ಉಚ್ಛರಿಸುತ್ತಾ ಕ್ರೀಡೆ0ಯುತೆ ಪ್ರಸ್ತುತಪಡಿಸುವುದು ಉದ್ದೇಶವಾಗಿತ್ತು. ನೃತ್ಯಾರಂಭದಲ್ಲಿ **'ತತ್'** ಎಂಬ ಶಬ್ಧೋಚ್ಚಾರಣೆಗೂ ಅರ್ಥವಿದೆ. ಸಾಮಾನ್ಯವಾಗಿ ಭಾರತದ ಇತರ ನೃತ್ಯಪ್ರಕಾರಗಳೂ ಸಹ ನೃತ್ಯದ ಪ್ರಾರಂಭವನ್ನು ತತ್ಕಾರಪೂರ್ವಕವಾಗಿ0ಯೇ ಆರಂಭಿಸುತ್ತಾರೆ. 0ಯಾವುದೇ ಶುಭಕರ್ಮಗಳೂ 0ಯಜ್ಞಭಾವನೆಯಿಂದ ಕೂಡಿದ್ದಲ್ಲಿ ಆ ಕರ್ಮವನ್ನು ತತ್ಕಾರಪೂರ್ವಕವಾಗಿ0ಯೇ



ಕಾ0ರ್ಯಕ್ರಮ ರೂಪಿಸಲು ಸಾಧ್ಯವಿದೆ. ಆದರೆ ಅಂತಹ ಮನಸ್ಸುಗಳ ಕೊರತೆಯಿದೆ. ಕಾಲಕ್ಕೆ ತಕ್ಕಂತೆ ಬದಲಾಗಬೇಕು ಎನ್ನುವುದೇನೋ ಸರಿ, ಆದರೆ 'ಕೋಲ ಕಟ್ಟುತ್ತಾ ಕೋಲಾಹಲ' ಮಾಡುವುದು ಎಷ್ಟು ಸರಿ? ಅದ್ಧೂರಿತನ, ಆಧುನಿಕತೆ ಬೇಕು. ಆದರೆ ಅವು ನೃತ್ಯದ ಸಾಂಪ್ರದಾಯಿಕ ಶಿಸ್ತುಗಳನ್ನೇ ಮುರಿ0ಯಬಾರದಲ್ಲವೇ? ರಂಗಪ್ರವೇಶ ರಂಗಕ್ಕೊಂದು ಪ್ರವೇಶವಾಗಬೇಕೇ ವಿನಃ, ಆಡಂಬರದ ಆಟಿಕೆ0ಯಾದರೆ ಅದಕ್ಕೆ ಬೇರೆ ಹೆಸರಿಟ್ಟು ಕರೆ0ಯುವುದು ಒಳಿತು!..

---

# ಮುಕ್ತ ಸ್ವಾಗತ

ನೂಪುರ ಭ್ರಮರಿ'0ಯನ್ನು ಚೆಂದವಾಗಿಸುವಲ್ಲಿ ಓದುಗರ ಅನಿಸಿಕೆ,ಅಭಿಪ್ರಾ0ಯ,ವಿಮರ್ಶೆಗಳು,ಸೌಹಾರ್ದ0ಯುತ ಟೀಕೆಗಳು ನಮಗೆ ಬೇಕು. ಒಳ್ಳೆ0ಯದನ್ನು ಹತ್ತು ಜನರಲ್ಲಿಹೇಳಿ....ಟೀಕೆ, ಟಿಪ್ಪಣಿಗಳ ಪರಾಮರ್ಶೆ0ಯನ್ನು ಪತ್ರಿಕೆ0ಯೊಂದಿಗೆ ಹಂಚಿಕೊಳ್ಳಿ. ನಿಮ್ಮ ಮುಕ್ತ ಅನಿಸಿಕೆ, ಸಂವಾದಗಳನ್ನು ಸದಾ ಸ್ವಾಗತಿಸುತ್ತದೆ...ಹಾಗಾದರೆ ಬರೆ0ಯುತ್ತೀರಲ್ಲವೇ? ಒಟ್ಟಿನಲ್ಲಿ ನಮ್ಮೊಂದಿಗೆ  ಪತ್ರಿಕೆ0ಯೂ ಬೆಳೆ0ಯಬೇಕು!

## ನೀವೂ ಬರೆಯಿರಿ............

**ನೂಪುರ ಭ್ರಮರಿ**0ಯನ್ನು ಮತ್ತಷ್ಟು ಶೃಂಗರಿಸಲು ನಿಮ್ಮಿಂದ ಲೇಖನಗಳನ್ನು ಆಹ್ವಾನಿಸುತ್ತಿದ್ದೇವೆ. ಖಾಸಗಿ ವಲ0ಯ ಪ್ರಸಾರಿತ ದ್ವೈಮಾಸಿಕವಾದರೂ, ಉತ್ತಮ ಗುಣಮಟ್ಟದ ಪತ್ರಿಕೆ0ಯನ್ನು ಬೆಳೆಸಬೇಕಾಗಿದೆ. ಈ ನಿಟ್ಟಿನಲ್ಲಿ ನಿಮ್ಮ ಕೊಡುಗೆ ನಮಗೆ ಅತ್ಯಮೂಲ್ಯ ಮತ್ತು ಅತ್ಯಗತ್ಯ. ಭರತನಾಟ್ಯದಷ್ಟೇ ಅಲ್ಲದೆ 0ಯಾವುದೇ ನೃತ್ಯ ಪ್ರಕಾರಗಳ ಕುರಿತಾಗಿ ಸ್ವಂತಿಕೆ0ಯುಳ್ಳ ಚಿಂತನಶೀಲ, ಸಂವಾದಿ ಮನೋಭಾವದ, ವಿಚಾರವೈಶಾಲ್ಯತೆ0ಯ, ವಿಮರ್ಶನ ಗುಣವಿರುವ ಲೇಖನಗಳಿಗೆ ಮೊದಲ ಆದ್ಯತೆ. ಲೇಖನಗಳು ನೃತ್ಯಮಾರ್ಗಕ್ಕೆ  ಸಂಬಂಧಿಸಿದ ಪ್ರಸ್ತುತ ನೆಲೆಗಟ್ಟು, ವಿಮರ್ಶೆ, ಸಂದರ್ಶನ, ಇತಿಹಾಸ ನುಡಿಚಿತ್ರ, ವ್ಯಕ್ತಿ ಅಥವಾ ಸಂಸ್ಥೆ ವಿಶೇಷ...ಹೀಗೆ ನಾನಾ ಮಾದರಿ0ಯಲ್ಲಿ ಇರಬಹುದು. ನೃತ್ಯದ ಬಗ್ಗೆ ಹಾರ್ದಿಕ, ಸೌಹಾರ್ದ0ಯುತ ಚಿಂತನೆ, ವಿಚಾರಪ್ರದ ವಿಮರ್ಶೆ ಹಾಗೂ ಲೇಖಕರಿಗೆ ಅವಕಾಶ ನೀಡುವುದು ಪತ್ರಿಕೆ0ಯ ಉದ್ದೇಶ. ಸಾಮಾನ್ಯ ವೀಕ್ಷಕರೂ ಕೂಡಾ ತಮ್ಮ ಅಭಿಪ್ರಾ0ಯಗಳನ್ನು ಮುಕ್ತವಾಗಿ ಹಂಚಿಕೊಳ್ಳಬೇಕೆಂಬುದು ನಮ್ಮ ಚಿಂತನೆ.

ನರ್ತನ ಸುರಭಿ

# ಅಲರಿಪು

ವೈಷ್ಣವಿ ಎನ್.

ಭರತನಾಟ್ಯದಲ್ಲಿ ರಂಗದ ಮೇಲೆ ಪ್ರದರ್ಶಿಸುವ ಪ್ರಥಮ ಅವಾಹನಾ ನೃತ್ಯವೇ 'ಅಲರಿಪು.' ಸಾಂಪ್ರದಾಯಿಕ ಭರತನಾಟ್ಯ ಕಾರ್ಯಕ್ರಮದ ಆರಂಭವೇ ಅಲರಿಪುವಿನಿಂದ. ಇದು ನೃತ್ತಕ್ಕೆ ಅಂದರೆ ಅಭಿನಯರಹಿತವಾದ ಹರ್ಷದಾಯಕ ಭಾಗಕ್ಕೆ ಪ್ರಾಧಾನ್ಯತೆ ಕೊಡುವ ಒಂದು ನೃತ್ಯಬಂಧ. ಮನಮೈಗಳು ಅರಳಿ ನರ್ತಕಿಯು ತನ್ನ ಮುಂದಿನ ಕಾರ್ಯಕ್ರಮಕ್ಕೆ ಸಜ್ಜಾಗಲು ಈ ಅಲರಿಪು ಉಪಯುಕ್ತವಾಗಿದೆ.

ಅಲರಿಪು ಎಂಬ ಶಬ್ಧ ಅಥವಾ ಸಮೀಪವಾಗಿರುವ ಪದ ನಾಟ್ಯ ಶಾಸ್ತ್ರದಲ್ಲಿ ಎಲ್ಲೂ ಕಂಡುಬರುವುದಿಲ್ಲ. ಆದ್ದರಿಂದ ಈ ಶಬ್ಧವು ಸಾಂಪ್ರದಾಯಿಕವಾಗಿ ರೂಢಿಯಲ್ಲಿ ಬಂದಿದೆ ಎನ್ನುತ್ತಾರೆ ವಿದ್ವಾಂಸರು. ಅಲರ್ ಎಂದರೆ ಹೂವು, ಅರಳು ಎಂದರ್ಥ. ಜೊತೆಗೆ ವ್ಯಾಪಿಸು, ವಿಸ್ತರಿಸು, ಪ್ರಾರಂಭಿಸು ಎಂದೂ; ತೆಲುಗಿನಲ್ಲಿ ಅಲರು ಎಂಬ ಶಬ್ಧಕ್ಕೆ ಪುಷ್ಪ ಅರಳುವುದನ್ನು, ಹಿಗ್ಗುವುದನ್ನು, ಪ್ರಕಾಶಿಸುವ, ಹೊಳೆಯುವ, ಸಂತಸ ಕೊಡುವ ಮತ್ತು ಹೊಂದುವ ಎಂದೂ; ತಮಿಳಿನಲ್ಲಿ ಸುಂದರ ಎಂದೂ ವ್ಯಾಖ್ಯಾನಿಸಬಹುದು. ಅಲರಿಂಚು ಎಂಬ ಶಬ್ದದ ಕ್ರಿಯಾಪದ ಅಲರಿಂಪು. ಇದರಿಂದ ಅನುನಾಸಿಕ ಅಕ್ಷರ ತೆಗೆದಾಗ ಅಲರಿಪು ಎಂದಾಗುತ್ತದೆ. ಈ ಶಬ್ಧದ ಉಚ್ಚಾರಣೆಯಲ್ಲಿಯೂ ಕೂಡಾ ಹಲವು ವಿಧ :- ಅಲರಿಪು, ಅಲರಿಪ್ಪು, ಅಲಾರಿಪು, ಅಲರುಪು, ಅಲಾರಿ, ಅಲರಿ, ಅಲ್ಲೈರಿಪ್ಪು.......ಇತ್ಯಾದಿ. ನೃತ್ತಭಾಗದಲ್ಲಿ ಈ ಅರ್ಥಕ್ಕೆ ಪುಷ್ಟಿಕೊಡುವ ಯಾವುದೇ ಚಲನವಲನ ಕಂಡುಬರದಿದ್ದರೂ, ಸರಳವಾದ ವಿವಿಧ ಚಲನೆಗಳಿಂದ ನೃತ್ಯ ಕಾರ್ಯಕ್ರಮಕ್ಕೆ ದೇಹವನ್ನು ಹೂವಿನಂತೆ ಅರಳಿಸುವುದು ಎಂಬ ಅರ್ಥವಿರಬಹುದು. ಜೊತೆಯಲ್ಲಿ ಪ್ರಾರ್ಥನಾರೂಪದ ಈ ನೃತ್ಯದಲ್ಲಿ ಸಾಂಕೇತಿಕವಾಗಿ ಪೂಜಿಸಿ, ಗುರುಹಿರಿಯರಿಗೆ ವಂದಿಸಿ ನೃತ್ಯ ಕಾರ್ಯಕ್ರನುಕ್ಕೆ ಶುಭಕೋರುವುದು ಇದರ ಹಿಂದಿನ ಉದ್ದೇಶವಾಗಿದೆ ಎನ್ನಲಾಗಿದೆ.

ಅಸ್ವರ ತಾಳಬದ್ಧ ಪಾಠಾಕ್ಷರಗಳಿರುವ, ತ್ರಿಕಾಲಗತಿಯ ನರ್ತನವನ್ನು ಒಳಗೊಂಡಿರುವ ಅಲಾರಿಪುವಿನಲ್ಲಿ ಮೂರುಭಾಗಗಳಿವೆ. ಸಂಗೀತದಲ್ಲಿ ಕಾಣುವ ಆರೋಹಣ, ಅವರೋಹಣದಂತೆಯೇ, ಅಲರಿಪುವಿನಲ್ಲಿ ಮೂಲಭೂತ ಆಂಗಿಕ ಚಲನೆಯಿದೆ. ಅಂಜಲಿ ಹಸ್ತದ ವಿನ್ಯಾಸದಿಂದ ತೊಡಗಿ ಸಮ, ಅರೆಮಂಡಿ, ಪೂರ್ಣಮಂಡಿ ಎಂಬ ಸ್ಥಾನಕಗಳನ್ನು ಬಳಸಿ ಕತ್ತು, ಕಣ್ಣು, ಕೈಕಾಲುಗಳ ಸರಳ ನಿರೂಪಣೆಯೊಂದಿಗೆ ನರ್ತಿಸಲಾಗುತ್ತದೆ. ಹೀಗೆ ಮೊದಲ ಭಾಗವು ಸಮಭಂಗಿಯಲ್ಲಿ ಆರಂಭ, ಅರ್ಧಮಂಡಿಯಲ್ಲಿ ಸರಳ ಅಡವುಗಳು. ಎರಡನೇ ಭಾಗದಲ್ಲಿ ಮೊದಲನೆಯ ಭಾಗದ ಪುನರಾವರ್ತನೆಯು ಪೂರ್ತಿ ಮಂಡಿ ಅಥವಾ ಮುಳುಮಂಡಿಯಲ್ಲಿ ಆಗುತ್ತದೆ. ಇಲ್ಲಿ



ಪ್ರೇರಿತ, ಮೋಹಿತ, ವಿಷಮ ಸೂಚಿ ಮಂಡಲಗಳನ್ನು ಬಳಸುತ್ತಾರೆ. ಮೂರನೆಯ ಭಾಗದಲ್ಲಿ ಕೆಲವು ಸರಳ ಅಡವುಗಳ ಜೋಡಣೆ ಹಾಗೂ ಮುಕ್ತಾಯದಲ್ಲಿ ಕೊನೆಗೊಳ್ಳುವಿಕೆ. ಈ ಮೂರು ಭಾಗಗಳ ಚಲನೆಗಳು ಒಂದು, ಎರಡು, ಮೂರನೆಯ ಕಾಲಗಳಿಗೆ ಸಂಯೋಜಿತವಾಗಿರುತ್ತದೆ. ಅಲರಿಪುವಿನಲ್ಲಿ ಮತ್ತೊಂದು ಗಮನಾರ್ಹ ಅಂಶವೆಂದರೆ ನೃತ್ಯ ಬಂಧದ ಪ್ರಾರಂಭದಲ್ಲಿ ಗ್ರೀವ ಚಲನೆ (ಮುಖಭಾಗ), ಎರಡನೆಯದು ಭುಜಗಳ ಚಲನೆ, ಮೂರನೆಯದು ಮಂಡಿಚಲನೆ (ಮೊಣಕಾಲು), ನಾಲ್ಕನೆಯದು ಪಾದಗಳು ಅಥವಾ ಅಡವುಗಳ ಚಲನೆ... ಹೀಗೆ ಶಿರಸ್ಸಿನಿಂದ ಪ್ರಾರಂಭವಾಗಿ ಕ್ರಮೇಣ ಪಾದಚಲನೆಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಮುಂದಿನ ನೃತ್ಯಬಂಧವಾದ ಜತಿ ಸ್ವರಕ್ಕೆ ಪೂರ್ವಭಾವಿಯಾಗಿರುವ ಅಡವುಗಳ ಲಕ್ಷಣ ಇಲ್ಲಿ ಕಂಡುಬರುತ್ತದೆ. ಮೈಯ್ಯ ಸಮತೋಲನ, ಅಂಗಶುದ್ಧಿ ರೇಖೆ, ತಾಳದ ಶುದ್ಧತೆ ಇವು ಅಲರಿಪುವಿನಲ್ಲಿ ಕಂಡುಬರುವ ಅಂಶಗಳು. ನೃತ್ತದ ವಿನ್ಯಾಸ ತೋರುವಲ್ಲಿ ಸಹಾಯಕವಾಗುವ ಅಲರಿಪು ಖಚಿತವಾದ ನಿರೂಪಣೆ, ಬಿಕ್ಕಟ್ಟಾದ ಸಂಯೋಜನೆಯನ್ನು ಅವಲಂಬಿಸಿರುತ್ತದೆ. ಹಾಗಾಗಿ ಕ್ರಮಪ್ರಕಾರವಾಗಿ ಶುದ್ಧರೀತಿಯಲ್ಲಿ ನರ್ತಿಸಿದರೆ ನರ್ತಕರ ವಿದ್ಯಾಸಾಮರ್ಥ್ಯವನ್ನು ಸುಲಭವಾಗಿ ಕಂಡುಹಿಡಿಯಬಹುದು.

ಅಲರಿಪುವನ್ನು ನರ್ತಿಸುವಾಗ ಸೊಂಟದಿಂದ ಮೇಲಿನ ದೇಹದ ಭಾಗವನ್ನು ಸ್ವಲ್ಪ ಮುಂದಕ್ಕೆ ಬಾಗಿಸಿ ನರ್ತಿಸುವುದು ರೂಢಿ. ಇದು ಸಮರ್ಪಣಾ ಭಾವವನ್ನು ಸಂಕೇತಿಸುತ್ತದೆ. ಎರಡೂ ಕೈಗಳನ್ನು ಪ್ರಾರಂಭದಲ್ಲಿ ಜೋಡಿಸಿ ತಲೆಯ ಮೇಲೆ ಅಂಜಲಿಹಸ್ತ ಎಂಬುದಾಗಿ ಹಿಡಿದು, ಆ ಕೈಗಳನ್ನು ಮುಖದ ಮುಂಭಾಗದಿಂದ ಎದೆಯ ಮುಂದಕ್ಕೆ ತಂದು, ಪಾರ್ಶ್ವಗಳಿಗೆ ಭುಜದ ನೇರಕ್ಕೆ ನಾಟ್ಯಾರಂಭದಲ್ಲಿ ಚಾಚಲಾಗುತ್ತದೆ. ಇದರಲ್ಲಿ ಕೈಗಳನ್ನು ತಲೆಯ ಮೇಲೆ ಇರಿಸಿದಾಗ ದೇವತೆಗಳಿಗೂ, ಹಣೆಯ ಮುಂದೆ ಗುರುಗಳಿಗೂ, ಎದೆಯ ಮುಂದಿರಿಸಿದಾಗ ಸಭೆಗೂ ನಮಸ್ಕರಿಸುವುದು ಎಂದರ್ಥ.

ನೃತ್ತ ಸೌಂದರ್ಯದ ಪರಾಕಾಷ್ಟೆಯೆನಿಸಿರುವ ಆಲರಿಪು ಕರ್ನಾಟಕ ಸಂಗೀತ ಸಂಪ್ರದಾಯದಲ್ಲಿನ ಅಲಂಕಾರಕ್ಕೂ ,ಗೀತಕ್ಕೂ ಸಂವಾದಿ ಎನ್ನಲಾಗಿದೆ. ಆದರೆ ರಂಗಮಂದಿರದ ದೇವತೆಗಳಿಗಾಗಲಿ, ಸಭೆಗಾಗಲಿ ನಮಸ್ಕರಿಸುವ ಮುದ್ರೆಗಳು ಇಲ್ಲಿಲ್ಲ. ದೇವತೆಗಳಿಗೆ ಸಂಬಂಧಿಸಿದ ಸ್ತ್ರೋತ್ರಗಳು, ಶ್ಲೋಕಗಳು, ಸಭೆಯ ಲಕ್ಷಣ ಕುರಿತಾದ ಸಾಹಿತ್ಯಕ್ಕೆ ಅಭಿನಯಗಳೂ ಇಲ್ಲಿಲ್ಲ. ಹಾಗಾಗಿ ಈಗಾಗಲೇ ನಂಬಲಾಗುತ್ತಿರುವ ಎಲ್ಲಾ ನಿರೂಪಣೆಗಳನ್ನು ಕೆಲವು ವಿದ್ವಾಂಸರು ನಿರಾಕರಿಸುತ್ತಾ ಪ್ರಶ್ನಿಸುತ್ತಾರೆ. ಅವರು ಕೊಡುವ ಕಾರಣಗಳು ಹೀಗಿವೆ...

. 1. ಶರೀರವನ್ನು ದೇವರಿಗೆ ಸಮರ್ಪಿಸಿವುದರ ಎಂಬ ಮಾತೇ ನಿಜವಾದರೆ ನಂತರ ಮುಂದಿನ ನೃತ್ಯಕಾರ್ಯಕ್ರಮವೇ ನಿಂತು ಹೋಗುವುದಲ್ಲ ?

2. ಅಲರ್ ಎಂದರೆ ಹೂ ಎಂಬ ಅಭಿಪ್ರಾಯವನ್ನು ಪುಷ್ಟಿಕರಿಸಲು ಅಗತ್ಯವಾದ ಮುದ್ರೆಗಳ ಬಳಕೆ (ಉದಾ:- ಮುಕುಳ, ಪದ್ಮಕೋಶ, ಅಲಪಲ್ಲವ ಹಸ್ತಗಳು) ಇಲ್ಲಿಲ್ಲ.